ವಿಜಯಪುರ | ಸಂಪುಟ 04 | ಸಂಚಿಕೆ 191 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily


ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಮಂಗಳವಾರ, ಸೆಪ್ಟೆಂಬರ್, 22, 2026



"ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಧಾನಿ ಮೋದಿಯನ್ನು ಟೀಕಿಸುವುದು ಸಜ್ಜನ ಮುಖವಾಡದ ದುರ್ಜನ ಶಾಸಕ ಸುರೇಶ್ ಕುಮಾರ್ ಅವರಿಗೆ ಸಹಿಸಲಾಗುತ್ತಿಲ್ಲ. ಬಿಜೆಪಿ ನಾಯಕರು ಈ ಹಿಂದೆ ಯುಪಿಎ ಅಧ್ಯಕ್ಷೆ ಸೋನಿಯಾ ಗಾಂಧಿ ವಿರುದ್ಧ ಮಾಡಿದ್ದ ಅವಹೇಳನಕಾರಿ ಹೇಳಿಕೆಗಳನ್ನು ಮರೆಯಲು ಸಾಧ್ಯವಿಲ್ಲ."

■ ಬಿ.ಕೆ.ಹರಿಪ್ರಸಾದ್
ಕೆಪಿಸಿಸಿ ಅಧ್ಯಕ್ಷರು

# ಪಶುವೈದ್ಯಾಧಿಕಾರಿ ನೇಮಕಾತಿ ಹಗರಣ ತನಿಖೆಗೆ ಎಸ್‌ಐಟಿ ರಚನೆ

## ಕೆಪಿಎಸ್ಸಿ ಹಗರಣ | ಅಲೋಕ್ ಕುಮಾರ್ ನೇತೃತ್ವದಲ್ಲಿ SIT ರಚನೆ | ಹೈಕೋರ್ಟ್‌ನಿಂದ ಮಹತ್ವದ ಆದೇಶ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ(ಕೆಪಿಎಸ್ ಸಿ) ನಡೆಸಿದ್ದ ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿ ಹಗರಣದ ತನಿಖೆಗಾಗಿ ಕರ್ನಾಟಕ ಹೈಕೋರ್ಟ್ ಸೋಮವಾರ ಹಿರಿಯ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಿ ಆದೇಶ ಹೊರಡಿಸಿದೆ.



ಜೈಲು ಮತ್ತು ತಿದ್ದುಪಡಿ ಸೇವೆಗಳ ಡಿಜಿಪಿ ಅಲೋಕ್ ಕುಮಾರ್ ನೇತೃತ್ವದ ಎಸ್‌ಐಟಿಯಲ್ಲಿ ಐಪಿಎಸ್ ಅಧಿಕಾರಿಗಳಾದ ದಿವ್ಯಾ ವಿ ಗೋಪಿನಾಥ್, ಅನುಪ್ ಎ ಶೆಟ್ಟಿ, ಕುಶಾಲ್ ಚೌಕ್ಸೆ ಮತ್ತು ಕ್ಷಮಾ ಮಿಶ್ರಾ ಅವರನ್ನು ಸದಸ್ಯರನ್ನಾಗಿ ನ್ಯಾಯಾಲಯ ನೇಮಿಸಿದೆ.



ಕೆಪಿಎಸ್ ಸಿ ಹಗರಣ ಕುರಿತು ಸಿಬಿಐ ತನಿಖೆ ಕೋರಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮತ್ತು ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಂಘ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶ ಎಂ ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠ, ಎಸ್‌ಐಟಿ ತನಿಖೆಗೆ ಆದೇಶಿಸಿದೆ.

ಮುಂದಿನ 100 ದಿನಗಳಲ್ಲಿ ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸಬೇಕು. 30 ದಿನಗಳಿಗೆ ಒಮ್ಮೆ ತನಿಖಾ ವರದಿಯ ವಿವರಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಬೇಕು ಎಂದು ಒಟ್ಟು 17 ನಿರ್ದೇಶಗಳನ್ನು ಹೈಕೋರ್ಟ್ ಎಸ್ ಐಟಿಗೆ ನೀಡಿದೆ.

ಕೆಪಿಎಸ್‌ಸಿ ಅಕ್ರಮಗಳ ಕುರಿತು ತನಿಖೆ ನಡೆಸುತ್ತಿರುವ ಸಿಐಡಿ ಇಲ್ಲಿಯವರೆಗೆ ಸಂಗ್ರಹಿಸಲಾದ ಸಂಪೂರ್ಣ ದಾಖಲೆಗಳು, ಸಾಮಗ್ರಿಗಳು ಮತ್ತು ಎಲೆಕ್ಟ್ರಾನಿಕ್ ಸಾಕ್ಷ್ಯಗಳನ್ನು ಎಸ್‌ಐಟಿಗೆ ವಹಿಸುವಂತೆ ನಿರ್ದೇಶಿಸಿದ ನ್ಯಾಯಾಲಯ, ಎಸ್‌ಐಟಿ, ಜಾರಿ ನಿರ್ದೇಶನಾಲಯ(ಇಡಿ) ದೊಂದಿಗೆ ಸಹಕರಿಸಬೇಕು ಎಂದು ಹೇಳಿದೆ.

ಅಲ್ಲದೆ ರಾಜ್ಯ ಸರ್ಕಾರ ಎಸ್‌ಐಟಿಗೆ ಪೊಲೀಸ್ ಠಾಣೆ ಸ್ಥಾನಮಾನ ನೀಡಬೇಕು. ಈ ಸಂಬಂಧ ಶೀಘ್ರ ಅಧಿಸೂಚನೆ ಹೊರಡಿಸಬೇಕು ಎಂದು ನ್ಯಾಯಪೀಠ ಸೂಚನೆ ನೀಡಿದೆ.

### ಪ್ರಕರಣದ ಹಿನ್ನೆಲೆ

ಪಶು ವೈದ್ಯಾಧಿಕಾರಿಗಳ ನೇಮಕಾತಿ ಪರೀಕ್ಷೆಯ ಫಲಿತಾಂಶ ಹೊರಬಿದ್ದ ತಕ್ಷಣ, ಸುಮಾರು 50ಕ್ಕೂ ಹೆಚ್ಚು ಪರೀಕ್ಷಾರ್ಥಿಗಳು ವಿಧಾನಸೌಧ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆ ಬೆನ್ನಲ್ಲೇ ಮಧ್ಯವರ್ತಿಗಳು ಪ್ರತಿ ಪಶು ವೈದ್ಯಾಧಿಕಾರಿ ಹುದ್ದೆಗೆ 70 ಲಕ್ಷದಿಂದ 80 ಲಕ್ಷದವರೆಗೆ ಲಂಚ ಕೇಳುತ್ತಿರುವ ಆಡಿಯೋ ಸಂಭಾಷಣೆಗಳು ಬಹಿರಂಗಗೊಂಡಿದ್ದವು. ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ ಸರ್ಕಾರವು ಇದರ ತನಿಖೆಯನ್ನು ಸಿಐಡಿ (ಸಿಐಡಿ)ಗೆ ವಹಿಸಿತ್ತು.

### ಶಾಸಕ ಬಸನಗೌಡ ಯತ್ನಾಳ & ಇತರರಿಂದ ಅರ್ಜಿ



ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಗೆ ಅಕ್ರಮವಾಗಿ ನೇಮಕವಾಗಲು ಸುಳ್ಳು ಜಾತಿ ಹಾಗೂ ಆದಾಯ ಪ್ರಮಾಣ ಪತ್ರ ನೀಡಿದ ಕೆಪಿ-ಎಸ್ಸಿ ಅಧ್ಯಕ್ಷರಾಗಿದ್ದ ಶಿವಶಂಕರಪ್ಪ ಸಾಹುಕಾರ್ ಅವರ ಪುತ್ರಿ ಸುಮಾ ಎಸ್. ಸಾಹುಕಾರ್ ವಿರುದ್ಧ ಮತ್ತು ಪಶು ವೈದ್ಯಾಧಿಕಾರಿಗಳ ಹುದ್ದೆಗಳ ನೇಮಕಾತಿ ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಅಭ್ಯರ್ಥಿಗಳ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣವನ್ನು(ಎಫಐಆರ್) ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಕೋರಿ ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮತ್ತು ಇತರರು ಅರ್ಜಿ ಸಲ್ಲಿಸಿದ್ದರು.

# ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ರೈತರ ಮನವಿ



■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಕೃಷಿ ಪಂಪ್‌ಸೆಟ್‌ಗಳಿಗೆ ನಿಗದಿಪಡಿಸಿರುವ 7ಗಂಟೆಗಳ ವಿದ್ಯುತ್ ಬದಲಾಗಿ ಕೇವಲ 6 ಗಂಟೆ ವಿದ್ಯುತ್ ಪೂರೈಕೆ ಮಾಡುತ್ತಿರುವುದನ್ನು ಖಂಡಿಸುತ್ತೇನೆ. ರೈತರ ಹಿತದೃಷ್ಟಿಯಿಂದ ನಿಗದಿತ ಅವಧಿಯಷ್ಟು ಸಮರ್ಪಕ ವಿದ್ಯುತ್ ಪೂರೈಕೆ ಮಾಡಬೇಕು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಿಂದಗಿ ತಾಲೂಕಾಧ್ಯಕ್ಷ ಧರಪ್ಪಗೌಡ ಬಿರಾದಾರ ಆಗ್ರಹಿಸಿದ್ದಾರೆ.

ಸಿಂದಗಿ ಹೆಸ್ಕಾಂ ಇಲಾಖೆ ಅಧಿಕಾರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ಒಂದು ಗಂಟೆ ವಿದ್ಯುತ್ ಕಡಿತವಾಗುವುದರಿಂದ ಬೆಳೆಗಳಿಗೆ ಸಮರ್ಪಕವಾಗಿ ನೀರು ಹಾಯಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಬೆಳೆಗಳು ಒಣಗುವ ಆತಂಕ ಎದುರಾಗಿದೆ. ರೈತರು ಬೀಜ, ಗೊಬ್ಬರ, ಔಷಧಿ, ಕೂಲಿ ಸೇರಿದಂತೆ ಅಪಾರ ಹಣ ಖರ್ಚು ಮಾಡಿ ಬೆಳೆ ಬೆಳೆದಿದ್ದಾರೆ. ವಿದ್ಯುತ್ ಕೊರತೆಯಿಂದ ನೀರಾವರಿ ಸಾಧ್ಯವಾಗದಿದ್ದರೆ ರೈತರು ಮತ್ತಷ್ಟು ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ವೇಳೆ ಜಿಲ್ಲಾಧ್ಯಕ್ಷ ರಮೇಶ ಹೂಗಾರ, ಬಸವರಾಜ ಹಿಪ್ಪರಗಿ, ಶ್ರೀಶೈಲಗೌಡ ಪಾಟೀಲ, ಗುಂಡುರಾವ ಬಿರಾದಾರ, ಬಸಯ್ಯ ದುಮ್ಮದ್ರಿ, ಶ್ರೀಶೈಲ ಫತ್ತರಗಿ, ಶಿವಪ್ಪ ಪಾಟೀಲ, ರಾಜಕುಮಾರ ಬಿರಾದಾರ, ಸಂತೋಷ ಬಸಗೊಂಡ, ಮಲ್ಲುಗೌಡ ಬಿರಾದಾರ, ಹಣಮಂತ ಜಾಲವಾದಿ ಸೇರಿದಂತೆ ಇತರರು ಇದ್ದರು.

**ರಾತ್ರಿ ವಿದ್ಯುತ್‌ನಿಂದ ಅಪಾಯ**

ರಾತ್ರಿ ವೇಳೆಯಲ್ಲಿ ವಿದ್ಯುತ್ ಪೂರೈಕೆ ಮಾಡುತ್ತಿರುವುದರಿಂದ ರೈತರು ಜೀವದ ಹಂಗು ತೊರೆದು ಹೊಲಗಳಿಗೆ ತೆರಳಿ ಪಂಪ್‌ಸೆಟ್‌ಗಳನ್ನು ಚಾಲನೆ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. ರಾತ್ರಿ ಹೊಲಗಳಿಗೆ ತೆರಳುವ ಸಂದರ್ಭದಲ್ಲಿ ಹಾವು, ವಿಷಜಂತುಗಳು ಸೇರಿದಂತೆ ವಿವಿಧ ಅಪಾಯಗಳ ಭೀತಿ ಎದುರಾಗುತ್ತಿದೆ. ಹಾಗಾಗಿ ರಾತ್ರಿ ವಿದ್ಯುತ್ ನಿಲ್ಲಿಸಿ, ಹಗಲು ವೇಳೆಯಲ್ಲೇ ಸಮರ್ಪಕ ವಿದ್ಯುತ್ ನೀಡಲು ರೈತರು ಆಗ್ರಹಿಸಿದರು

# ಕಡಣಿಯಲ್ಲಿ ವಿವಿಧ ಕಾಮಗಾರಿಗೆ ಶಾಸಕ ಮನಗೂಳಿ ಭೂಮಿ ಪೂಜೆ

■ ಉದಯರಶ್ಮಿ ದಿನಪತ್ರಿಕೆ




ಆಲಮೇಲ: ಕರ್ನಾಟಕ ನೀರಾವರಿ ನಿಗಮ ನಿಯಮಿತ ಹಾಗೂ ಭೀಮಾ ಏತ ನೀರಾವರಿ ಸೊನ್ನ ಬ್ಯಾರೇಜ್ ಹಿನ್ನೀ-ರಿನ ಭಾದ್ಯತ ಸ್ಥಳವಾದ ಕಡಣಿ ಗ್ರಾಮದಲ್ಲಿ ನಾಲ್ಕು ಮೂಲಭೂತ ಸೌಕರ್ಯಗಳಿಗೆ ಸುಮಾರು 2 ಕೋಟಿ 50 ಲಕ್ಷ ರೂಪಾಯಿಗಳ ಕಾಮಗಾರಿಗಳಿಗೆ ಶಾಸಕ ಅಶೋಕ ಮನಗೂಳಿ ಭವ್ಯ ಮೆರವಣಿಗೆ ಮೂಲಕ ಆಗಮಿಸಿ ಭೂಮಿ ಪೂಜೆ ನೆರವೇರಿಸಿದರು.

ನಂತರ ಶಾಸಕ ಮನಗೂಳಿ ಶ್ರೀ ಗಜಾನನ ಮಹಾಮಂಡಳಿಯವ-ರಿಂದ ಗೌರವ ಸನ್ಮಾನ ಸ್ವೀಕರಿಸಿ ಮಾತನಾಡಿ, ನಾನು ಆಲಮೇಲ ಜನತೆಗೆ ಎರಡು ಗ್ಯಾರಂಟಿಗಳನ್ನು ಕೊಟ್ಟಿದ್ದೇನೆ ಒಂದು ತೋಟಗಾ-ರಿಕೆ ಕಾಲೇಜು. ಎರಡನೇದು ಕಡಣಿಯ ಬ್ಯಾರೇಜ್ ನೀಡುವ ಮೂಲಕ ಜನರಿಗೆ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇನೆ ಎಂದ ಅವರು ಪಿ ಕೆಪಿಎಸ್ ಕಟ್ಟಡಕ್ಕೆ ರೂ.5 ಲಕ್ಷ ನೀಡುವುದಾಗಿ ಭರವಸೆ ನೀಡಿದರು.

ಕಡಣಿ ಗ್ರಾಮದ ಮಹಿಳೆಯರು ತಮ್ಮ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು ಬಯಲು ಶೌಚಾಲಯಕ್ಕೆ ಹೋಗಲು ಹೆಣ್ಣು ಮಕ್ಕಳಿಗೆ ಬಹಳ ತೊಂದರೆ ಇದೆ ಕೂಡಲೇ ಶಾಸಕರು ಸಂಬಂಧಪಟ್ಟ ಅಧಿಕಾ-ರಿಗಳ ಗಮನಕ್ಕೆ ತಂದು ನಮಗೆ ಶೌಚಾಲಯಕ್ಕೆ ಹೋಗಲು ಅನುಕೂಲ ಮಾಡಿಕೊಡಬೇಕೆಂದು ಮಹಿಳೆಯರು ಶಾಸಕರಲ್ಲಿ ಮನವಿ ಮಾಡಿಕೊಂಡರು

ಇದೇ ವೇಳೆ ಮಹಿಳೆಯರು ಕುಡಿಯುವ ನೀರು, ಬಯಲು ಶೌಚಾಲಯ ಬೇಡಿಕೆ ಕುರಿತ ಮನವಿಗೆ ಸ್ಪಂದಿಸಿದ ಶಾಸಕರು ಬೇಗ ಈಡೇರಿಸುವ ಭರವಸೆ ನೀಡಿದರು. ಆಲಮೇಲ್ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಾಧಿಕ್ ಸುಂಬಡ, ರಮೇಶ ಬಂಟನೂರ, ಗಂಗಾಧರ ಶ್ರೀಗಿರಿ ಮಾತನಾಡಿದರು.

ಈ ಸಂದರ್ಭದಲ್ಲಿ ಮಾಜಿ ಗ್ರಾಪಂ ಅಧ್ಯಕ್ಷ ಬಸವರಾಜ ತಾವರಗೇರಿ ಮಾಜಿ ತಾಪಂ ಸದಸ್ಯ ಕಮಲಾಕರ ಕತ್ತಿ, ಗುತ್ತಿಗೆದಾರ ವೀರಭದ್ರ ಕತ್ತಿ, ಹನುಮಂತ್ರಾಯ ಕಳಸಗೊಂಡ, ಕೇದಾರ್ನಾಥ ಕತ್ತಿ, ಸಾತನಗೌಡ ಬಿರಾದಾರ, ಮಲ್ಲು ಪ್ಯಾಟಿ, ಶರಣಪ್ಪ ನಾಟಿಕಾರ, ಸುರೇಶ ಪೂಜಾರಿ, ಪರಶುರಾಮ್ ಕಟ್ಟಿಮನಿ ಸೇರಿದಂತೆ ಅನೇಕ-ರಿದ್ದರು.

# ಕೆರೆ ತುಂಬಿದ ಮೇಲಷ್ಟೇ ಅಮರ್ಜಾ ಡ್ಯಾಂಗೆ ನೀರು ಬಿಡಿ




## ರಾಜ್ಯ ಹೆದ್ದಾರಿ ತಡೆದು ರೈತರ ಬೃಹತ್ ಪ್ರತಿಭಟನೆ, ಶಾಸಕರ ಮನೆ ಮುತ್ತಿಗೆ ಎಚ್ಚರಿಕೆ

■ ಉದಯರಶ್ಮಿ ದಿನಪತ್ರಿಕೆ

ಅಫಜಲಪುರ: ಸ್ಥಳೀಯ ಕೆರೆಗಳಿಗೆ ನೀರು ತುಂಬಿಸಿದ ನಂತರವೇ ಅಮರ್ಜಾ ಜಲಾಶಯಕ್ಕೆ ನೀರು ಹರಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ನೂರಾರು ರೈತರು ರಾಜ್ಯ ಹೆದ್ದಾರಿ ತಡೆದು ಬೃಹತ್ ಪ್ರತಿಭಟನೆ ನಡೆಸಿದರು. ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ರೈತ ಸಂಘದ ಜಿಲ್ಲಾಧ್ಯಕ್ಷ ಮಹಾಂತೇಶ್ ಜಮಾದಾರ್, "ನಮ್ಮ ಭಾಗದ ಕೆರೆಗಳು ಭರ್ತಿಯಾಗುವ ಮುನ್ನ ಯಾವುದೇ ಕಾರಣಕ್ಕೂ ಅಮರ್ಜಾ ಡ್ಯಾಂಗೆ ನೀರು ಬಿಡಬಾರದು. ಮೊದಲು ನಮ್ಮ ಕೆರೆಗಳನ್ನು ತುಂಬಿಸಿ ಅಂತರ್ಜಲ ಮಟ್ಟ ಹೆಚ್ಚಿಸಬೇಕು. ರೈತರ ಈ ನ್ಯಾಯಯುತ ಬೇಡಿಕೆಯನ್ನು ನಿರ್ಲಕ್ಷಿಸಿದರೆ ಮುಂದಿನ ದಿನಗಳಲ್ಲಿ ಅಫಜಲಪುರ ಶಾಸಕರ ಮನೆಗೆ ಮುತ್ತಿಗೆ ಹಾಕುವುದು ಖಚಿತ," ಎಂದು ಎಚ್ಚರಿಕೆ ನೀಡಿದರು.

ರಸ್ತೆ ತಡೆದು ನಡೆಸಿದ ಧರಣಿಯಿಂದಾಗಿ ಹೆದ್ದಾರಿಯಲ್ಲಿ ಕೆಲಕಾಲ ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತ್ತು. ವಿಷಯ ತಿಳಿದ ತಕ್ಷಣ ಭೀಮಾ ಏತ ನೀರಾವರಿ ಯೋಜನೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಂಇಇ) ಹಾಗೂ ತಾಲೂಕು ತಹಸೀಲ್ದಾರ್ ಸ್ಥಳಕ್ಕೆ ಭೇಟಿ ನೀಡಿದರು.

ರೈತರ ಅಹವಾಲುಗಳನ್ನು ಆಲಿಸಿದ ಅಧಿಕಾ-ರಿಗಳು, ಕೆರೆ ತುಂಬಿಸುವ ಸಂಬಂಧ ಸೂಕ್ತ ಕ್ರಮ ಕೈಗೊಂಡು ಸಮಸ್ಯೆಯನ್ನು ಶೀಘ್ರವಾಗಿ ಬಗೆಹ-ರಿಸುವುದಾಗಿ ಭರವಸೆ ನೀಡಿದ ನಂತರ ರೈತರು ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಹಿಂಪಡೆದರು.

ಈ ಸಂದರ್ಭದಲ್ಲಿ ಅಫಜಲಪುರ ತಾಲೂಕು ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕು ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ನೂರಾರು ರೈತರು ಉಪಸ್ಥಿತರಿದ್ದರು.

# ಆಚರಣೆಗಳಿಂದ ಹಿಂದುತ್ವ ಬೆಳೆಯುತ್ತದೆ: ಅಪ್ಪು ಪಟ್ಟಣಶೆಟ್ಟಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಭಾಷಣಗಳಿಂದ ಹಿಂದೂತ್ವ ಬೆಳೆಯುವುದಿಲ್ಲ, ಆಚರಣೆಗಳಿಂದ ಹಿಂದುತ್ವ ಬೆಳೆಯುತ್ತದೆ ಆ ನಿಟ್ಟಿನಲ್ಲಿ ನಾವೆಲ್ಲ ಒಂದಾಗಿ ಗಣೇಶೋತ್ಸವ ಆಚರಣೆ ಮಾಡಬೇಕು. ಧರ್ಮ ಉಳಿಯಬೇಕಾದರೆ ಸಿಡಿಲ ಸನ್ಯಾಸಿ ಸ್ವಾಮೀಜಿ ವಿವೇಕಾನಂದರ ಮಾರ್ಗದರ್ಶನದಲ್ಲಿ ನಾವು ನಡೆಯಬೇಕು ಎಂದು ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಹೇಳಿದರು.

ನಗರದ ಮಹಾತ್ಮಾ ಗಾಂಧಿ ವೃತ್ತದಲ್ಲಿ ರವಿವಾರ ಶ್ರೀ ಗಜಾನನ ಉತ್ಸವ ಮಹಾಮಂಡಳ ವತಿಯಿಂದ ನಗರದ ಗಜಾನನ ಮಂಡಳಿ ಅಧ್ಯಕ್ಷರಿಗಾಗಿ ಹಮ್ಮಿಕೊಳ್ಳಲಾಗಿದ್ದ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಎಲ್ಲ ಧರ್ಮದವರೂ ಒಟ್ಟಾಗಿ ಆಚ-ರಿಸುವ ಯಾವುದಾದರೂ ಹಬ್ಬವಿದ್ದರೆ ಅದು ಗಣೇಶನ ಹಬ್ಬವಾಗಿದೆ ಎಂದರು.




## ವಿಜಯಪುರದಲ್ಲಿ ಶ್ರೀ ಗಜಾನನ ಉತ್ಸವ ಮಹಾಮಂಡಳ ವತಿಯಿಂದ ನಡೆದ ಸನ್ಮಾನ ಕಾರ್ಯಕ್ರಮ

ಮುಖಂಡ ರಾಘವ ಅಣ್ಣಿಗೇರಿ ಮಾತನಾಡಿ, ಗಣೇಶೋತ್ಸವದ ಸಂದರ್ಭದಲ್ಲಿ ಯುವಕರು ಕೇವಲ ಹಬ್ಬದ ಸಂಭ್ರಮಕ್ಕೆ ಸೀಮಿತವಾಗದೆ, ದೇಶದ ಏಕತೆ, ಶಾಂತಿ, ಸಂಸ್ಕೃತಿ ಹಾಗೂ ರಾಷ್ಟ್ರಭಕ್ತಿಯ ಬಗ್ಗೆ ಜಾಗೃತರಾಗಿರಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ದಲಿತ ಮುಖಂಡ ಅಡಿವೆಪ್ಪ ಸಾಲಗಲ, ಶಿವಾನಂದ ಮಾನಕರ, ಗಜಾನನ ಉತ್ಸವ ಮಹಾಮಂಡಳ ಅಧ್ಯಕ್ಷ ಸಚಿನ ಚವ್ಹಾಣ, ಗೋಪಾಲ ಘಟಕಾಂಬಳೆ, ಪರಶುರಾಮ ರಜಪೂತ, ರವಿ ಬಗಲಿ, ಪ್ರಕಾಶ ಮಿರ್ಜಿ, ಭೀಮಾಶಂಕರ ಹದನೂರ, ರಾಜು ಬಿರಾದಾರ, ನಂದು ಗಡಗಿ, ಕಿಟ್ಟು ಬಂಡಿವಡ್ಡರ, ಕಾಂತು ಶಿಂದೆ, ರವಿ ಮುಕರ್ತಿಹಾಳ, ಮಹೇಶ ಕುಂಬಾರ, ಶರತ ಬಿರಾದಾರ, ಗುರು ಗೋಲಗೇರಿ, ರಾಜು ಹುನ್ನೂರ ಹಾಗೂ ಗಜಾನನ ಉತ್ಸವ ಮಹಾಮಂಡಳದ ಸದಸ್ಯರು ಉಪಸ್ಥಿತ-ರಿದ್ದರು.

# ಸೌಹಾರ್ದ ಸಹಕಾರಿ ಸಂಘಗಳ ಸಾಲ ವಸೂಲಿಗೆ ಒಕ್ಕೂಟದಿಂದ ಪ್ರಯತ್ನ

## ಒಕ್ಕೂಟದ ಅಧ್ಯಕ್ಷ ಹಾಗೂ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕ ಸಂಜಯ ಪಾಟೀಲ ಕನಮಡಿ ಹೇಳಿಕೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯ ಸೌಹಾರ್ದ ಸಹಕಾರಿ ಸಂಸ್ಥೆಗಳ ಸಾಲ ಮರುಪಾವತಿಗೆ ಅಗತ್ಯ ಸಹಕಾರ ಒದಗಿಸುವುದು, ಬಾಕಿ ಇರುವ ಸಾಲ ವಸೂಲಿ ಪ್ರಕರಣಗಳನ್ನು ಇತ್ಯರ್ಥ-ಗೊಳಿಸುವುದು ಹಾಗೂ ಅಮಲಜಾರಿ ಪ್ರಕರಣಗಳನ್ನು ಪರಿಹರಿಸಲು ಸಂಸ್ಥೆಗಳಿಗೆ ನೆರವು ನೀಡುವುದು ಸೌಹಾರ್ದ ಸಹಕಾರಿಗಳ ಒಕ್ಕೂಟದ ಪ್ರಮುಖ ಉದ್ದೇಶವಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕ ಸಂಜಯ ಪಾಟೀಲ ಕನಮಡಿ ಹೇಳಿದರು.

ನಗರದಲ್ಲಿ ಜಿಲ್ಲೆಯ ವಿವಿಧ ಸೌಹಾರ್ದ ಸಹಕಾರಿ ಸಂಸ್ಥೆಗಳ ಪ್ರತಿನಿಧಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಸೌಹಾರ್ದ ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ಸಾಲ ವಸೂಲಿ ಪ್ರಮುಖ ವಿಷಯುವಾಗಿದೆ. ಸಾಲಗಾರರು ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿ ಮಾಡದಿದ್ದರೆ ಸಂಸ್ಥೆಗಳ ಆರ್ಥಿಕ ವ್ಯವಹಾರಗಳ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ ಸಾಲ ವಸೂಲಿಗೆ ಸಂಬಂಧಿಸಿದ ಪ್ರಕರಣಗಳು ಕಾನೂನು ಪ್ರಕ್ರಿಯೆಯಲ್ಲಿ ದೀರ್ಘಕಾಲ ಬಾಕಿ ಉಳಿಯದಂತೆ ಒಕ್ಕೂಟದ ಮೂಲಕ ಅಗತ್ಯ ಮಾರ್ಗದರ್ಶನ ಹಾಗೂ ಸಹಕಾರ ನೀಡಲಾಗುವುದು ಎಂದು ಅವರು ತಿಳಿಸಿದರು.

ಒಕ್ಕೂಟದ ಉಪಾಧ್ಯಕ್ಷ ಚಂದ್ರಶೇಖರ ಕವಟಗಿ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಒಕ್ಕೂಟದ ನಿರ್ದೇಶಕರಾದ ಅರುಣ ಮಠ, ಆರ್.ಡಿ.ಕುಲಕರ್ಣಿ, ಚಂದ್ರಶೇಖರ ಪಾಟೀಲ, ಸಿದ್ದು ಮಲ್ಲಿಕಾರ್ಜುನಮಠ, ದೀಪಕ ಶಿಂತ್ರೆ, ಪರಶುರಾಮ ಚಿಂಚಳಿ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಬಸವರಾಜ ಉಪಸ್ಥಿತರಿದ್ದರು.




ಜಿಲ್ಲೆಯ ವಿವಿಧ ಸೌಹಾರ್ದ ಸಹಕಾರಿ ಸಂಸ್ಥೆಗಳ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಸಭೆಯ ನಿರೂಪಣೆಯನ್ನು ಯಮನಪ್ಪ ಸಾತಿಹಾಳ ನೆರವೇರಿಸಿದರು. ಸಭೆಯ ವಿಷಯಗಳನ್ನು ಒಕ್ಕೂಟದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆದ ಪಂಪನಗೌಡ ಪಾಟೀಲ ಮಂಡಿಸಿದರು. ನಿರ್ದೇಶಕ ಅರುಣ ವಾರದ ವಂದಿಸಿದರು.

## ಎಂ ಎಸ್ ವಾಲಿ ಒಬ್ಬ ಅದಮ್ಯ ಚೇತನ : ಡಾ. ಪಡಶೆಟ್ಟಿ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ಸಾಲೋಟಗಿಯ ಡಾ. ಎಂ.ಎಸ್.ವಾಲಿ ಅವರ ವ್ಯಕ್ತಿತ್ವ ಅಧ್ಯಯನ ಪೂರ್ಣ ಹಾಗೂ ಯುವಕ-ರಿಗೆ ಪ್ರೇರಣಾದಾಯಕವಾಗಿದೆ. ಅವರು ಜಾನಪದ ತಜ್ಞರಾಗಿ ಹಾಗೂ ಸಾಹಿತಿಯಾಗಿ ಪ್ರಾಧ್ಯಾಪಕರಾಗಿ, ಕನ್ನಡ ಪರ ಹೋರಾಟಗಾರರಾಗಿ ಹಾಗೂ ಅಪಾರ ಸಾಹಿತ್ಯ ಕೃತಿಗಳ ಮೂಲಕ ಸಾರಸ್ವತ ಲೋಕ ಶ್ರೀಮಂತ ಗೊಳಿಸಿದ್ದಾರೆ ಎಂದು ನಾಡಿನ ಜಾನಪದ ತಜ್ಞ ಸಿಂದಗಿಯ ಡಾ ಎಂ.ಎಂ ಪಡಶೆಟ್ಟಿ ಹೇಳಿದರು. ಶನಿವಾರದಂದು ಭೀಮಾಂತರಂಗ ಆನ್ ಲೈನ್ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಜಗಲಿ ಕೇಂದ್ರದ ವತಿಯಿಂದ ಹಮ್ಮಿಕೊಂಡ "ಡಾ ಎಂ ಎಸ್ ವಾಲಿ ಬದುಕು ಮತ್ತು ಸಾಹಿತ್ಯ' ಕುರಿತ ಆನ್ ಲೈನ್ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಅವರು ಮಾತನಾಡಿದರು. ಸಾಲೋಟಗಿ ಒಂದು ಐತಿಹಾಸಿಕ ಗ್ರಾಮ ಹಾಗೂ ಪ್ರಾಚೀನ ವಿದ್ಯಾ ಕೇಂದ್ರವಾಗಿತ್ತು. ಹಾಗಾಗಿ ಅಲ್ಲಿ ಹುಟ್ಟಿ ಬೆಳೆದ ವಾಲಿ ಅವರು ನಾಡಿನ ಕೆಲಸ ಮಾಡಿ ಸಾಲೋಟಗಿಗೆ ಹೆಸರು ತಂದು ಕೊಟ್ಟರು ಎಂದು ಅಭಿಪ್ರಾಯ ಪಟ್ಟರು. ಸಾಹಿತಿ ಗೀತಯೋಗಿ ಸಮಾರೋಪ ಭಾಷಣ ಮಾಡಿ, ಡಾ. ಎಂ. ಎಸ್ ವಾಲಿ ಅವರು ಸಾಲೋಟಗಿಯ ಹೆಮ್ಮೆ ಆಗಿದ್ದಾರೆ ಮತ್ತು ಸಿದ್ದೇಶ್ವರ ಮಹಾಸ್ವಾಮಿಗಳನ್ನು ಸಾಲೋಟಗಿಗೆ ತಂದು ಇಲ್ಲಿ ಅವರ ಕುರಿತಾದ ವಿಚಾರ ಹರಡಿಸಲು ಕಾರಣ-ರಾದವರಲ್ಲಿ ಡಾ.ಎಂ. ಎಸ್ ವಾಲಿ ಅವರು ಒಬ್ಬರು ಎಂದು ಹೇಳಿದರು. ಡಾ ಚನ್ನಪ್ಪ ಕಟ್ಟಿ, ಸಿ ಎಂ ಬಂಡಗರ, ರಾಘವೇಂದ್ರ ಕುಲಕರ್ಣಿ, ವೈ ಜಿ ಬಿರಾದಾರ, ಶ್ರೀಧರ ಹಿಪ್ಪರಗಿ, ರಾಜು ಕೊಪ್ಪ, ಪತ್ರಕರ್ತ ನಿಂಗಣ್ಣ ಬಿರಾದಾರ, ಡಾ ರಾಜಶ್ರೀ ಮಾರನೂರ, ಸಂಗನಗೌಡ ಹಚಡದ, ಅನಿತಾ ಅಳಗುಂಡಗಿ, ರೇಖಾ ನಾಗರಾಣ ಸೇರಿದಂತೆ ಅನೇಕರು ಭಾಗವಹಿಸಿದ್ದರು. ಶಿಕ್ಷಕಿ ಸರೋಜಿನಿ ಮಾವಿನಮರ ಸ್ವಾಗತಿಸಿ ಪರಿಚಯಿಸಿದರು. ಶಿಕ್ಷಕ ಸಂತೋಷ ಬಂಡೆ ನಿರೂಪಿಸಿ ವಂದಿಸಿದರು.

## ಮಕ್ಕಳಲ್ಲಿ ಶಿಕ್ಷಣದೊಂದಿಗೆ ಸಂಸ್ಕಾರವೂ ಇರಲಿ : ಶಾಸಕ ರಾಜುಗೌಡ

### ಉತ್ನಾಳ ಗ್ರಾಮದಲ್ಲಿ ಶಾಲೆಯ ಮುಖ್ಯದ್ವಾರ ಹಾಗೂ ಶಾಲಾ ಕೊಠಡಿ ಉದ್ಘಾಟನೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: (ಬಸವನ ಬಾಗೇವಾಡಿ-ಉತ್ನಾಳ) ಇಂದಿನ ಮಕ್ಕಳಲ್ಲಿ ಸಂಸ್ಕಾರದ ಕೊರತೆ ಎದ್ದು ಕಾಣುತ್ತಿದ್ದು ಕೇವಲ ಶಾಲಾ ಪಠ್ಯದ ಶಿಕ್ಷಣದಿಂದ ಸಮಾಜದ ಅಭಿವೃದ್ಧಿ ಮತ್ತು ಸ್ವಾಸ್ಥ್ಯ ಸಾಧ್ಯವಿಲ್ಲ ಎಂದು ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕ ರಾಜುಗೌಡ ಪಾಟೀಲ ಅಭಿಪ್ರಾಯಪಟ್ಟರು.

ಅವರು ಬಸವನ ಬಾಗೇವಾಡಿಯ ಉತ್ನಾಳ ಗ್ರಾಮದಲ್ಲಿ ನಿನ್ನೆ ಜರುಗಿದ ಸರಕಾರಿ ಕಿರಿಯ ಪ್ರಾಥ-ಮಿಕ ಶಾಲೆಯ ಮುಖ್ಯದ್ವಾರ ಮತ್ತು ನೂತನ ಕೊಠಡಿಯ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಶಾಲಾ ಶಿಕ್ಷಣವು ಜೀವನೋಪಾಯಕ್ಕೆ ಆದ-ಾರವಾದರೆ ಸಂಸ್ಕಾರದ ಶಿಕ್ಷಣವು ಸಮಾಜಮುಖಿ ಬದುಕಿಗೆ ನೆರವಾಗುತ್ತದೆ ಎಂದರು.

ಲಕ್ಷೆಣಟಿಜಜಜಿಟಿಜಜಪಲಕ್ಷ ರೂ. ತಮ್ಮ ದುಡಿಮೆಯ ಹಣವನ್ನು ಖರ್ಚು ಮಾಡಿ ತಾವು ಕಲಿತ ಉತ್ನಾಳದ ಶಾಲೆಯ ಮುಖ್ಯದ್ವಾರ ನಿರ್ಮಾಣಕ್ಕೆ ನೆರವಾದ ವಿಜಯಪುರದ ಪ್ರತಿಷ್ಠಿತ ಎಕ್ಸಲಂಟ್ ಶಿಕ್ಷಣ ಸಂಸ್ಥೆಯ ಚೇರ್ಮನ್ ಬಸವರಾಜ ಅವರ ಸೇವೆಯನ್ನು ಶ್ಲಾಘಿಸಿದರು.

ಮುಖ್ಯ ಅತಿಥಿ ಕರ್ನಾಟಕ ಬಾಲ ವಿಕಾಸ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಮಾತನಾಡಿ, ಈ ದೇಶದ ಭವಿಷ್ಯ ಶಾಲಾ ಕೊಠಡಿಗಳಲ್ಲಿ ನಿರ್ಮಾಣವಾಗುತ್ತದೆ. ಶಾಲೆಯು ಜೀವಂತ ದೇವರುಗಳ ದೇವಾಲಯವಾಗಿದ್ದು ಇಂಥ ದೇಗುಲಗಳಲ್ಲಿ ಮಾತ್ರ ಮೌಲ್ಯಯುತ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ಇತ್ತೀಚಿಗೆ ದೈವಾಧೀನರಾದ ಸಾಧ್ವಿ ನೀಲಮ್ಮ ಶಾಂತಪ್ಪ ಕೌಲಗಿ ಅವರ ಸ್ಮರಣಾರ್ಥ ನಿರ್ಮಾಣಗೊಂಡಿರುವ ಈ ಶಾಲೆಯ ಮುಖ್ಯ ದ್ವಾರ ನಿರ್ಮಾಣದ ರೂವಾರಿ ಶ್ರೀ ಬಸವರಾಜ ಕೌಲಗಿ ಅಂಥವರೂ ಕೂಡಾ ಉತ್ನಾಳದ ಈ ಪುಟ್ಟ ಊರಿನ ಸರಕಾರಿ ಶಾಲೆಯಲ್ಲೇ ಓದಿದ ಜೀವಂತ ದೇವರಾಗಿದ್ದಾರೆ ಎಂದರು.

ಶಾಲಾ ಕೊಠಡಿ ಉದ್ಘಾಟನೆ ಮಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ರೇಣುಕಾ ಕಲಬುರ್ಗಿ, ಪ್ರೌಢಶಾಲಾ ಶಿಕ್ಷಕ, ವಾಗ್ಮಿ ಅಶೋಕ ಹಂಚಲಿ ಮಾತನಾಡಿದರು.

ಸಮಾರಂಭದಲ್ಲಿ ಕೊಡುಗೈ ದಾನಿ ಬಸವರಾಜ ಕೌಲಗಿ ಅವರು ಉತ್ನಾಳದ ಸರಕಾರಿ ಶಾಲೆಯನ್ನು ದತ್ತು ಪಡೆಯುವ ವಾಗ್ದಾನ ಮಾಡಿದರು. ಎಲ್ಲಾ ಪಾಲಕರು ತಪ್ಪದೇ ತಮ್ಮ ಮಕ್ಕಳಿಗೆ ಅಕ್ಷರ ಸಂಸ್ಕಾರ ನೀಡಲು ಮರೆಯಬಾರದು ಎಂದರು.

ಸಮಾರಂಭದ ವೇದಿಕೆಯಲ್ಲಿ ಎಕ್ಸಲಂಟ್ ಶಿಕ್ಷಣ ಸಂಸ್ಥೆಯ ಗೌರವಾಧ್ಯಕ್ಷ ರಾಜಶೇಖರ ಕೌಲಗಿ, ತಾಲೂಕಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಚ್.ಬಿ. ಬಾರೀಕಾಯಿ, ಶಿಕ್ಷಣ ಸಂಯೋಜಕ ಷಣ್ಮುಖ ಅಂಬಲಿ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಸಮಾರಂಭದ ಸಾನಿಧ್ಯವನ್ನು ನಿವೃತ್ತ ಮುಖ್ಯ ಶಿಕ್ಷಕ ವೇ.ಚಂದ್ರಶೇಖರಯ್ಯ ಹಿರೇಮಠ, ಉತ್ನಾಳ ಕೋರಿ ಮಠದ ಹಣಮಂತ ಮಹಾರಾಜ, ಲಕ್ಷ್ಮಿದೇವಿ ಆರಾಧಕ ವೇ.ಸಂಗಮೇಶ ಹೀರೇಮಠ ವಹಿಸಿದ್ದರು. ಅಧ್ಯಕ್ಷತೆ ವಹಿಸಿದ ಎಸ್.ಡಿ.ಎಂ.ಸಿ ಯ ಮಹಾಂತೇಶ ಹತ್ತರಕಿಹಾಳ ಅತಿಥಿ-ಅಭ್ಯಾಗತರನ್ನು ಸನ್ಮಾನಿಸಿ ಗೌರವಿಸಿದರು. ಮುಖ್ಯ ಶಿಕ್ಷಕ ಬಿ. ಬಿ. ಬಾಗೇವಾಡಿ ಕಾರ್ಯಕ್ರಮ ನಿರೂಪಿಸಿದರು. ಸಹಶಿಕ್ಷಕರು, ಎಸ್.ಡಿ.ಎಂ.ಸಿ ಯ ಉಪಾಧ್ಯಕ್ಷರು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

## ಶಾಸಕರಿಗೆ ಅಭಿನಂದಿಸಿದ ಮಹಿಪಾಲರಡ್ಡಿ ಡಿಗ್ಗಾವಿ

■ ಉದಯರಶ್ಮಿ ದಿನಪತ್ರಿಕೆ

ಕೆಂಭಾವಿ: ಶಹಾಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಕೆಂಭಾವಿ ಹೋಬಳಿಯ ಗ್ರಾಮಗಳು ಹಾಗೂ ಸುರಪುರ ತಾಲೂಕನ್ನು ಬರಪೀಡಿತ ಪ್ರದೇಶಗಳೆಂದು ಸರ್ಕಾರ ಘೋಷಣೆ ಮಾಡುವಲ್ಲಿ ಯಶಸ್ವಿಯಾದ ಶಾಸಕರು ಹಾಗೂ ಮಾಜಿ ಸಚಿವರಾದ ಶರಣಬಸಪ್ಪಗೌಡ ದರ್ಶನಾಪುರ ಅವರಿಗೆ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರಾದ ಮಹಿಪಾಲ್ ರೆಡ್ಡಿ ಡಿಗ್ಗಾವಿ ಅಭಿನಂದನೆ ಸಲ್ಲಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, "ಸರ್ಕಾರದ ಮೊದಲ ಹಂತದ ಬರಪೀಡಿತ ಪಟ್ಟಿಯಲ್ಲಿಯೇ ಸುರಪುರ ತಾಲೂಕು ಹಾಗೂ ಶಹಾಪುರ ವಿಧಾನಸಭಾ ಕ್ಷೇತ್ರದ ಗ್ರಾಮಗಳು ಸೇರ್ಪಡೆಯಾಗಬೇಕಿತ್ತು. ಆದರೆ, ಕೆಲ ತಾಂತ್ರಿಕ ಕಾರಣಗಳಿಂದಾಗಿ ಘೋಷಣೆ ವಿಳಂಬವಾಗಿತ್ತು. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಶಾಸಕ ಶರಣಬಸಪ್ಪಗೌಡ ದರ್ಶನಾಪುರ ಅವರು ಸರ್ಕಾರದ ಮಟ್ಟದಲ್ಲಿ ನಿರಂತರವಾಗಿ ಬೆನ್ನುಬಿದ್ದು, ತಾಂತ್ರಿಕ ದೋಷಗಳನ್ನು ನಿವಾರಿಸುವ ಮೂಲಕ ಕೆಂಭಾವಿ ಹೋಬಳಿ ಹಾಗೂ ಸುರಪುರ ತಾಲೂಕನ್ನು ಬರಪೀಡಿತ ಎಂದು ಘೋಷಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ" ಎಂದು ತಿಳಿಸಿದ್ದಾರೆ.



ಸಂಕಷ್ಟದಲ್ಲಿರುವ ರೈತರ ನೆರವಿಗೆ ಧಾವಿಸಿ, ಕೆಂಭಾವಿ ಹೋಬಳಿಯ ಗ್ರಾಮಗಳನ್ನು ಬರಪೀಡಿತ ಪಟ್ಟಿಗೆ ಸೇರ್ಪಡೆಗೊಳಿಸಲು ಶ್ರಮಿಸಿದ ಶಾಸಕ ಶರಣಬಸಪ್ಪಗೌಡ ದರ್ಶನಾಪುರ ಅವರ ಜನಪರ ಕಾಳಜಿ ಮತ್ತು ತ್ವರಿತ ಕಾರ್ಯಪ್ರವೃತ್ತಿಗೆ ಈ ಭಾಗದ ರೈತರು ಹಾಗೂ ಸಾರ್ವಜನಿಕರು ವ್ಯಾಪಕ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದರಿಂದಾಗಿ ರೈತರಿಗೆ ಬರ ಪರಿಹಾರ ಹಾಗೂ ಅಗತ್ಯ ನೆರವು ಸಿಗುವಂತಾಗಿದೆ".

■ ಮಹಿಪಾಲ್ ರೆಡ್ಡಿ ಡಿಗ್ಗಾವಿ
ಯಾದಗಿರಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರು.

## ಸಾಲಬಾಧೆ ತಾಳಲಾರದೆ ರೈತ ಆತ್ಮಹತ್ಯೆ

■ ಉದಯರಶ್ಮಿ ದಿನಪತ್ರಿಕೆ



ದೇವರ ಹಿಪ್ಪರಗಿ: ತೀವ್ರ ಬರಗಾಲ ಮತ್ತು ಖಾಸಗಿ ಫೈನಾನ್ಸ್‌ಗಳ ಸಾಲದ ಸುಳಿಗೆ ಸಿಲುಕಿದ ರೈತರೊಬ್ಬರು ಭಾನುವಾರ ಆತ್ಮಹತ್ಯೆ ಮಾಡಿಕೊಂಡಿರುವ ದುರ್ಘಟನೆ ತಾಲೂಕಿನ ಹುಣಶ್ಯಾಳ ಗ್ರಾಮದಲ್ಲಿ ನಡೆದಿದೆ.ಗ್ರಾಮದ ಜೆಟ್ಟೆಪ್ಪ ಭೀಮಪ್ಪ ದೊಡ್ಡಮನಿ (55) ಆತ್ಮಹತ್ಯೆಗೆ ಶರಣಾದ ದುರ್ದೈವಿ ರೈತ.

ಮೃತರ ಬಳಿ ಕೇವಲ ಒಂದುವರೆ ಎಕರೆ ಜಮೀನಿದ್ದು, ಮಳೆಯಿಲ್ಲದೆ ಬೆಳೆ ಸಂಪೂರ್ಣವಾಗಿ ಒಣಗಿ ಹೋಗಿತ್ತು. ಕೃಷಿ ನಿರ್ವಹಣೆ ಮತ್ತು ಕುಟುಂಬದ ನಿರ್ವಹಣೆಗಾಗಿ ಇವರು ಇಎಫ್ ಹಾಗೂ ಫೈವ್ ಸ್ಟಾರ್ ಬಿಜಿನೆಸ್ ಫೈನಾನ್ಸ್ ಸೇರಿದಂತೆ ವಿವಿಧ ಖಾಸಗಿ ಸಂಸ್ಥೆಗಳಿಂದ ಮತ್ತು ಊರಿನವರಲ್ಲಿ ಕೈಗಡವಾಗಿ ಒಟ್ಟು ಸುಮಾರು 4.50 ಲಕ್ಷ ಸಾಲ ಮಾಡಿದ್ದರು.

### ವಿಜಯಪುರದಲ್ಲಿ 'ಕದಂಬ ಸೇನೆ' ಸಂಘಟನೆಯ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ್ ಹೇಳಿಕೆ

## 'ಕಾಮನ್ ಮ್ಯಾನ್ ನಾನೇ ಸಿಎಂ' ಸಿನಿಮಾ ಸೆ.25ಕ್ಕೆ ಬಿಡುಗಡೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಹಿರಿಯ ನಿರ್ದೇಶಕ ಓಂ ಸಾಯಿಪ್ರಕಾಶ್ ನಿರ್ದೇಶನದ 'ಕಾಮನ್ ಮ್ಯಾನ್ ನಾನೇ ಸಿಎಂ' ಕನ್ನಡ ಚಲನಚಿತ್ರ ಸೆ.25 ರಂದು ರಾಜ್ಯಾದ್ಯಂತ ಬಿಡುಗಡೆ ಆಗಲಿದೆ ಎಂದು ಕದಂಬ ಸೇನೆ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ್ ಹೇಳಿದರು.

ನಗರದಲ್ಲಿ ರವಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾನ್ಯನ ಧ್ವನಿ ಅಧಿಕಾರದ ಗದ್ದುಗೆ ಏರಿದಾಗ ಏನಾಗುತ್ತದೆ ಎಂಬುದನ್ನು ತಿಳಿಸುವ

ಕಾಮನ್ ಮ್ಯಾನ್ ನಾನೇ ಸಿಎಂ ಚಲನಚಿತ್ರ ತನ್ನದೇ ಆದ ರಾಜ-ಕೀಯ ಕ್ರಾಂತಿಯನ್ನು ತೆರೆಯ ಮೇಲೆ ಅನಾವರಣಗೊಳಿಸಿದೆ. ಕನ್ನಡಿಗರಿಗೆ ಈ ಚಲನಚಿತ್ರರಾಜಕೀಯಬದಲಾವಣೆಗಳನ್ನು ತರಲು ಸ್ಫೂರ್ತಿ ಸಿಕ್ಕಂತಾಗುತ್ತದೆ ಎಂದರು. ಸುರಭಿ ಫಿಲಂಸ್ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷರು ಕಥೆ ನಿರ್ಮಾಪಕರು ಮತ್ತು ಮುಖ್ಯಮಂತ್ರಿ ಪಾತ್ರದಲ್ಲಿ ವಿಶಿಷ್ಟ ವಾಗಿ ಅಭಿನಯಿಸಿರುವ ರಂಗಭೂಮಿ ಕಲಾವಿದ ಡಾ ಎನ್ ನರಸಿಂಹಮೂರ್ತಿ ರವರು ಸಾಮಾನ್ಯ ಜನರ ಬದುಕಿನೊಂದಿಗೆ ಬೆಸೆದುಕೊಂಡಿರುವ ಹಾಗೂ

ಗುರಿ ಇರುವ ಒಬ್ಬ ಸಾಮಾನ್ಯ ಪ್ರಜ್ಞಾವಂತ ವಕೀಲನ ಕೈಗೆ ಅಧಿಕಾರ ಸಿಕ್ಕರೆ ಆತ ಏನು ಮಾಡಬಹುದು ಎಂಬುದನ್ನು ಯುವಕರಿಗೆ ತೋರಿಸುವ ಕಥಾನಾಯಕನಾಗಿ ಅಭಿನಯಿಸಿದ್ದಾರೆ. ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯ, ಭ್ರಷ್ಟಾಚಾರ ಮತ್ತು ಜನ ಸಾಮಾನ್ಯರು ಪ್ರತಿನಿತ್ಯ ಎದುರಿಸುತ್ತಿರುವ ಸಮಸ್ಯೆಗಳು ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಏನೇನು ಕ್ರಮ ಕೈಗೊಳ್ಳಬೇಕು ಎಂದು ಈ ಚಿತ್ರ ಜನರ ಮನಸ್ಸಿನ ಮೇಲೆ ಆಳವಾದ ಪರಿಣಾಮ ಬೀರುತ್ತದೆ ಎಂದರು. ಚಿತ್ರದಲ್ಲಿ ನಾಯಕಿರಾಗಿ ಸೋನಲ್ ಲಾಡ್ವಾ ಮತ್ತು ಸಬ್ಬಿ ಸೂರಿ ಅತ್ಯುತ್ತಮವಾಗಿ ನಟಿಸಿದ್ದಾರೆ. ಕಥಾನಾಯಕ ರಂಗಭೂಮಿ ಕಲಾವಿದ ಡಾ ಎನ್ ನರಸಿಂಹಮೂರ್ತಿ ಅವರು ಕದಂಬ ಸೈನ್ಯ ಕನ್ನಡ ಸಂಘಟನೆ ಗೌರವ ಅಧ್ಯಕ್ಷರು ಕೂಡ ಎನ್ನುವುದು ಹೆಮ್ಮೆಯ ವಿಷಯ ಎಂದು ಬೇಕ್ರಿ ರಮೇಶ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಎನ್ ಸಿ ಕಾಂಬಳೆ, ರಾಜ್ಯ ಕಾರ್ಯದರ್ಶಿ ವಿನಾಯಕ ಸೊಂಡೂರ, ಜಿಲ್ಲಾ ಅಧ್ಯಕ್ಷ ಈರಯ್ಯ ಹಿರೇಮಠ, ಉಪಾಧ್ಯಕ್ಷ ಇಫಾ9ನ್ ಬೀಳಗಿ ಸೇರಿದಂತೆ ಆನಂದ ಕಾಳಗಿ ಮತ್ತು ಪ್ರಮುಖರು ಉಪಸ್ಥಿತರಿದ್ದರು.

# ಮುರಿಯುತ್ತಿರುವ ಮೈತ್ರಿಗಳು, ಬದಲಾಗುತ್ತಿರುವ ಶಕ್ತಿಸಮೀಕರಣ




■ ಉದಯರಶ್ಮಿ ದಿನಪತ್ರಿಕೆ




ಆಕಾಶ ರೋಡಗಿ
ಶಿವೂರ - ಅಫಜಲಪುರ
ಕಲಬುರ್ಗಿ ಜಿಲ್ಲೆ

ಜಾಗತಿಕರಾಜಕಾರಣದಲ್ಲಿಶಾಶ್ವತಮಿತ್ರರೂಇಲ್ಲ,ಶಾಶ್ವತಶತ್ರುಗಳೂ ಇಲ್ಲ; ಶಾಶ್ವತವಾಗಿರುವುದು ರಾಷ್ಟ್ರಗಳ ಹಿತಾಸಕ್ತಿ ಮಾತ್ರ ಎಂಬ ಹಳೆಯ ರಾಜಕೀಯ ಸತ್ಯಕ್ಕೆ ಇಂದಿನ ಪಶ್ಚಿಮ ಏಷ್ಯಾ ಮತ್ತೊಮ್ಮೆ ಕನ್ನಡಿ ಹಿಡಿದಿದೆ.

ನಕ್ಷೆಯಲ್ಲಿ ಗಡಿಗಳು ಬದಲಾಗದಿದ್ದರೂ, ಶಕ್ತಿಯ ಸಮೀಕರಣಗಳು ಪ್ರತಿದಿನ ಬದಲಾಗುತ್ತಿವೆ. ಒಮ್ಮೆ ವಿಶ್ವದ ಭದ್ರತೆ, ಆರ್ಥಿಕತೆ ಮತ್ತು ರಾಜತಾಂತ್ರಿಕತೆಯ ಬಹುತೇಕ ಎಲ್ಲಾ ದಿಕ್ಕುಗಳನ್ನು ನಿರ್ಧರಿಸುತ್ತಿದ್ದ ಏಕಧ್ರುವೀಯ ವ್ಯವಸ್ಥೆ ಇಂದು ಬಹುಧ್ರುವೀಯ ವಾಸ್ತವದೊಂದಿಗೆ ಮುಖಾಮುಖಿಯಾಗಿದೆ.

ಇರಾನ್‌ನೊಂದಿಗೆ ಅಮೆರಿಕದ ಸಂಘರ್ಷ, ಯೆಮೆನ್‌ನ ಹೌತಿ ದಾಳಿಗಳು, ಸೌದಿ ಅರೇಬಿಯಾದ ಭದ್ರತಾ ಆತಂಕ, ಕೆಂಪು ಸಮುದ್ರದ ಸಾಗಣೆ ಮಾರ್ಗಗಳ ಅಸ್ಥಿರತೆ ಇವೆಲ್ಲವನ್ನೂ ಪ್ರತ್ಯೇಕ ಘಟನೆಗಳೆಂದು ನೋಡಲು ಸಾಧ್ಯವಿಲ್ಲ. ಇವುಗಳ ಹಿಂದೆ ಜಾಗತಿಕ ಶಕ್ತಿಯ ಪುನರ್‌ವ್ಯವಸ್ಥೆಯ ದೊಡ್ಡ ಚಿತ್ರವಿದೆ.

ಒಪ್ಪಂದವಿದ್ದರೂ ಜಾರಿಗೊಳಿಸುವ ಶಕ್ತಿ ಎಲ್ಲಿದೆ?

ಸೌದಿ ಅರೇಬಿಯಾ, ಪಾಕಿಸ್ತಾನ ಮತ್ತು ಟರ್ಕಿ 2026ರ ಆಗಸ್ಟ್‌ನಲ್ಲಿ ಮೆಕ್ಕಾ ಜಂಟಿ ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿವೆ. ಒಪ್ಪಂದದ ಪ್ರಕಾರ, ಮೂರು ರಾಷ್ಟ್ರಗಳಲ್ಲಿ ಯಾವುದಾದರೂ ಒಂದರ ಮೇಲೆ ಸಶಸ್ತ್ರ ದಾಳಿ ನಡೆದರೆ ಅದನ್ನು ಮೂರರ ಮೇಲಿನ ದಾಳಿಯೆಂದು ಪರಿಗಣಿಸುವ ಉದ್ದೇಶವಿದೆ.

ಆದರೆ ಅಂತರರಾಷ್ಟ್ರೀಯ ರಾಜಕಾರಣದಲ್ಲಿ ಒಪ್ಪಂದದ ಅಕ್ಷರಕ್ಕಿಂತ ಅದರ ಕಾರ್ಯವಿಧಾನವೇ ಮುಖ್ಯ. ಯಾವ ಪರಿಸ್ಥಿತಿಯಲ್ಲಿ ಯಾರು ಸೇನೆ ಕಳುಹಿಸುತ್ತಾರೆ? ಯಾರು ನಿರ್ಧಾರ ತೆಗೆದುಕೊಳ್ಳುತ್ತಾರೆ? ಎಷ್ಟು ಪ್ರಮಾಣದ ನೆರವು ನೀಡುತ್ತಾರೆ? ನೇರ ಸೈನಿಕ ಹಸ್ತಕ್ಷೇಪವೇ ಅಥವಾ ಗುಪ್ತಚರ, ವಾಯು ರಕ್ಷಣಾ ಮತ್ತು ತಾಂತ್ರಿಕ ನೆರವೇ? ಇಂತಹ ಪ್ರಶ್ನೆಗಳಿಗೆ ಸ್ಪಷ್ಟವಾದ ಕಾರ್ಯವಿಧಾನ ಇನ್ನೂ ರೂಪುಗೊಳ್ಳಬೇಕಿದೆ ಎಂದು ವಿಶ್ಲೇಷಣೆಗಳು ಸೂಚಿಸುತ್ತಿವೆ.

ಅದಕ್ಕಾಗಿಯೇ ಸೌದಿ ಅರೇಬಿಯಾದ ಮೇಲಿನ ಹೌತಿ ದಾಳಿಗಳು ಈ ಒಪ್ಪಂದಕ್ಕೆ ಮೊದಲ ದೊಡ್ಡ ಪರೀಕ್ಷೆಯಾಗಿವೆ.

ಸೆಪ್ಟೆಂಬರ್ 19ರಂದು ರಿಯಾದ್‌ನ ಕಿಂಗ್ ಖಾಲಿದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಸ್ಫೋಟಗಳು ಮತ್ತು ಬೆಂಕಿ ಕಾಣಿಸಿಕೊಂಡಿದ್ದು, ಅದಕ್ಕೂ ಮುನ್ನ ಸೌದಿ ಸರ್ಕಾರ ವಾಯುದಾಳಿ ಎಚ್ಚರಿಕೆ ನೀಡಿತ್ತು. ಈ ಘಟನೆಗಳು ಸೌದಿ ಭದ್ರತಾ ವ್ಯವಸ್ಥೆಯ ಮೇಲಿನ ಒತ್ತಡವನ್ನು ಮತ್ತಷ್ಟು ಹೆಚ್ಚಿಸಿವೆ.

ಇಲ್ಲಿ ಒಂದು ಪಾಠ ಸ್ಪಷ್ಟ: ರಕ್ಷಣಾ ಒಪ್ಪಂದ ಮಾಡಿಕೊಳ್ಳುವುದು ಒಂದು ವಿಷಯ; ಅದನ್ನು ಯುದ್ಧದ ಕ್ಷಣದಲ್ಲಿ ಕಾರ್ಯಗತಗೊಳಿಸುವುದು ಮತ್ತೊಂದು ವಿಷಯ.

ಸೌದಿಗೆ ಎದುರಾಗಿರುವ ಮತ್ತೊಂದು ಪ್ರಶ್ನೆ ರಕ್ಷಣಾ ಸ್ವಾವಲಂಬನೆ

ಸೌದಿ ಅರೇಬಿಯಾ ಹಲವು ವರ್ಷಗಳಿಂದ ಅತ್ಯಾ ಧುನಿಕ ವಿದೇಶಿ ರಕ್ಷಣಾ ವ್ಯವಸ್ಥೆಗಳನ್ನು ಖರೀದಿಸುತ್ತಾ ಬಂದಿದೆ. ಆದರೆ ಇಂದಿನ ಸಂಘರ್ಷವು ದುಬಾರಿ ಶಸ್ತ್ರಾಸ್ತ್ರಗಳನ್ನು ಹೊಂದಿರುವುದೇ ಸಾಕಾಗುವು ದಿಲ್ಲ ಎಂಬ ಪ್ರಶ್ನೆಯನ್ನು ಎತ್ತಿದೆ.

ಅಮೆರಿಕ, ಪಾಕಿಸ್ತಾನ, ಟರ್ಕಿ, ಬ್ರಿಟನ್, ಫ್ರಾನ್ಸ್ ಮತ್ತು ಇತರ ದೇಶಗಳ ನೆರವಿನ ಬಗ್ಗೆ ಸೌದಿ ಚರ್ಚಿಸುತ್ತಿರುವ ವರದಿಗಳಿವೆ. ಇದೇ ಸಂದರ್ಭದಲ್ಲಿ ಸೌದಿಯ ಕ್ಷಿಪಣಿ ಪ್ರತಿಬಂಧಕ ಸಾಮರ್ಥ್ಯದ ಮೇಲೂ ಒತ್ತಡವಿದೆ ಎಂದು ವರದಿಗಳು ಹೇಳುತ್ತಿವೆ.

ಇದರ ಅರ್ಥ ಸೌದಿಯ ಸಂಪೂರ್ಣ ರಕ್ಷಣಾ ವ್ಯವಸ್ಥೆ ವಿಫಲವಾಗಿದೆ ಎಂದು ಹೇಳುವುದು ಅಲ್ಲ. ಬದಲಿಗೆ, ಆಮದು ಮಾಡಿದ ರಕ್ಷಣಾ ವ್ಯವಸ್ಥೆ + ಸ್ವದೇಶಿ ನಿರ್ವಹಣೆ + ಸಾಕಷ್ಟು ಪ್ರತಿಬಂಧಕ ಸಾಮಗ್ರಿ + ಸ್ವತಂತ್ರ ಗುಪ್ತಚರ ಸಾಮರ್ಥ್ಯ + ತರಬೇತಿಇವೆಲ್ಲವೂ ಒಟ್ಟಾಗಿ ಇದ್ದಾಗ ಮಾತ್ರ ಆಧುನಿಕ ರಕ್ಷಣಾ ವ್ಯವಸ್ಥೆ ಪರಿಣಾಮಕಾರಿ ಎಂಬುದನ್ನು ಈ ಬಿಕ್ಕಟ್ಟು ತೋರಿಸುತ್ತಿದೆ.

ಇದೇ ಪಾಠ ಭಾರತಕ್ಕೂ ಅನ್ವಯಿಸುತ್ತದೆ.

ಭಾರತದ 'ರಣತಂತ್ರದ ಸ್ವಾಯತ್ತತೆ' ಏಕೆ ಮುಖ್ಯ?

ಭಾರತವುಅಮೆರಿಕದೊಂದಿಗೆಸ್ನೇಹಹೊಂದಿದೆ.ರಷ್ಯಾದೊಂದಿಗೆ ದೀರ್ಘಕಾಲದ ರಕ್ಷಣಾ ಸಂಬಂಧ ಹೊಂದಿದೆ. ಇಸ್ರೇಲ್‌ನೊಂದಿಗೆ ತಂತ್ರಜ್ಞಾನ ಮತ್ತು ರಕ್ಷಣಾ ಸಹಕಾರವಿದೆ. ಇರಾನ್‌ನೊಂದಿಗೆ ಐತಿಹಾಸಿಕ ಮತ್ತು ಪ್ರಾದೇಶಿಕ ಹಿತಾಸಕ್ತಿಗಳಿವೆ. ಅರಬ್ ರಾಷ್ಟ್ರಗಳೊಂದಿಗೆ ಇಂಧನ, ವ್ಯಾಪಾರ ಮತ್ತು ವಲಸೆ ಸಂಬಂಧಗಳಿವೆ. ಒಂದೇ ಸಮಯದಲ್ಲಿ ಬ್ರಿಕ್ಸ್, ಎಸ್ ಸಿ ಓ, ಕ್ವಾಡ್ ಮುಂತಾದ ವಿಭಿನ್ನ ವೇದಿಕೆಗಳಲ್ಲೂ ಭಾರತ ತನ್ನ ಹಿತಾಸಕ್ತಿಗಳನ್ನು ಮುಂದುವರಿಸುತ್ತಿದೆ.

ಇದುಗೊಂದಲವಲ್ಲ;ಇದುಬಹುಮುಖಿರಾಜತಾಂತ್ರಿಕತೆಯಅಗತ್ಯ.

ಜಗತ್ತಿನ ಒಂದು ಶಕ್ತಿ ಬಣದೊಂದಿಗೆ ಸಂಪೂರ್ಣವಾಗಿ ನಿಂತು ಮತ್ತೊಂದು ಬಣವನ್ನು ಶತ್ರುವೆಂದು ಪರಿಗಣಿಸುವ ಕಾಲಕ್ಕಿಂತ, ಪ್ರತಿಯೊಂದು ರಾಷ್ಟ್ರದೊಂದಿಗೆ ವಿಷಯಾಧಾ-ರಿತವಾಗಿ ಸಂಬಂಧ ಬೆಳೆಸುವ ಕಾಲ ಹೆಚ್ಚು ಪ್ರಸ್ತುತವಾಗಿದೆ.

ಭಾರತದ ನಿಜವಾದ ಶಕ್ತಿ ಯಾರಾದರೂ ಬಂದು ರಕ್ಷಿಸುತ್ತಾರೆ ಎಂಬ ಭರವಸೆಯಲ್ಲಿ ಇರಬಾರದು. ಭಾರತವನ್ನು ರಕ್ಷಿಸುವ ಸಾಮರ್ಥ್ಯ ಭಾರತದಲ್ಲೇ ಇರಬೇಕು.

ಆತ್ಮನಿರ್ಭರತೆ ಎಂದರೆ ಕೇವಲ ಘೋಷಣೆ ಅಲ್ಲ

ಆತ್ಮನಿರ್ಭರ ಭಾರತ ಎಂದರೆ ಕೇವಲ ದೇಶೀಯವಾಗಿ ಬಂದೂಕು ಅಥವಾ ಕ್ಷಿಪಣಿ ತಯಾರಿಸುವುದಲ್ಲ. ಸೆಮಿಕಂಡಕ್ಟರ್‌ನಿಂದ ಡ್ರೋನ್‌ವರೆಗೆ, ಎಂಜಿನ್‌ನಿಂದ ರಾಡಾರ್‌ವರೆಗೆ, ಸೈಬರ್ ತಂತ್ರಜ್ಞಾನದಿಂದ ಕೃತಕ ಬುದ್ಧಿಮತ್ತೆಯವರೆಗೆಸಂಪೂರ್ಣ ತಂತ್ರಜ್ಞಾನ ಸರಪಳಿಯನ್ನು ನಿರ್ಮಿಸುವುದು.

ಯುದ್ಧದ ಸಂದರ್ಭದಲ್ಲಿ ಒಂದು ದೇಶದಿಂದ ಬಿಡಿಭಾಗ ಬರದಿದ್ದರೆ ಮತ್ತೊಂದು ದೇಶದ ಕಾರ್ಖಾನೆ ನಿಂತುಹೋಗುವಂತಹ ವ್ಯವಸ್ಥೆ ದೀರ್ಘಕಾಲದ ಭದ್ರತೆಯಲ್ಲ.

ಇಂದು ಜಗತ್ತು ಕಲಿಯುತ್ತಿರುವ ಪಾಠವೇನೆಂದರೆ- ಆಯುಧ ಖರೀದಿಸುವ ರಾಷ್ಟ್ರಕ್ಕಿಂತ ಆಯುಧದ ತಂತ್ರಜ್ಞಾನವನ್ನು ಅರ್ಥಮಾಡಿಕೊಂಡು ಉತ್ಪಾದಿಸುವ ರಾಷ್ಟ್ರಕ್ಕೆ ಹೆಚ್ಚು ಕಾರ್ಯತಂತ್ರದ ಸ್ವಾತಂತ್ರ್ಯವಿರುತ್ತದೆ.

ಸುಂಕದಿಂದ ಮಾತ್ರ ಕೈಗಾರಿಕಾ ಕ್ರಾಂತಿ ಸಾಧ್ಯವಿಲ್ಲ

ಇದೇ ತತ್ವ ಆರ್ಥಿಕತೆಯಲ್ಲಿಯೂ ಅನ್ವಯಿಸುತ್ತದೆ.

ವಿದೇಶಿ ಉತ್ಪನ್ನಗಳಿಗೆ ಸುಂಕ ಹೆಚ್ಚಿಸಿದರೆ ದೇಶೀಯ ಉತ್ಪಾದನೆಗೆ ಒಂದು ರಕ್ಷಣಾ ಗೋಡೆ ಸಿಗಬಹುದು. ಆದರೆ ಆ ಗೋಡೆಯ ಒಳಗೆ ಕಾರ್ಖಾನೆ ನಿರ್ಮಾಣವಾಗುವುದಿಲ್ಲ. ಕಾರ್ಖಾನೆಗಾಗಿ ವಿದ್ಯುತ್ ಬೇಕು, ನೀರು ಬೇಕು, ಭೂಮಿ ಬೇಕು, ಬಂದರು ಬೇಕು, ರಸ್ತೆ ಬೇಕು, ರೈಲು ಬೇಕು, ಕೌಶಲ್ಯ ಬೇಕು, ಹಣಕಾಸು ಬೇಕು, ತಂತ್ರಜ್ಞಾನ ಬೇಕು ಮತ್ತು ಮುಖ್ಯವಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧಿಸುವ ಸಾಮರ್ಥ್ಯ ಬೇಕು.

ಆದ್ದರಿಂದ 'ಸುಂಕ' ಒಂದು ಸಾಧನವಾಗಬಹುದು; ಕೈಗಾರಿಕಾ ನೀತಿಯ ಪರ್ಯಾಯವಾಗಲು ಸಾಧ್ಯವಿಲ್ಲ.

ಭಾರತವು ಜಾಗತಿಕ ಉತ್ಪಾದನಾ ಕೇಂದ್ರವಾಗಬೇಕಾದರೆ ಕೇವಲ ಚೀನಾದಿಂದ ಆಮದು ಕಡಿಮೆ ಮಾಡುವ ಗುರಿ ಸಾಕಾಗುವುದಿಲ್ಲ. ಚೀನಾದಿಂದ ಹೊರಬರುತ್ತಿರುವ ಜಾಗತಿಕ ಪೂರೈಕೆ ಸರಪಳಿಯಲ್ಲಿ ಭಾರತ ಯಾವ ಸ್ಥಾನ ಪಡೆಯಲಿದೆ ಎಂಬುದೇ ಮುಖ್ಯ.

ಡೆಟ್ರಾಯಿಟ್‌ನ ಪಾಠ

ಒಮ್ಮೆ ಅಮೆರಿಕದ ಕೈಗಾರಿಕಾ ಶಕ್ತಿಯ ಸಂಕೇತವಾಗಿದ್ದ ಡೆಟ್ರಾಯಿಟ್‌ನ ಕಥೆಯನ್ನು ಕೇವಲ ಕಾರು ಉದ್ಯಮದ ಪತನವೆಂದು ನೋಡುವುದು ತಪ್ಪು. ಅದು ತಂತ್ರಜ್ಞಾನ ಬದಲಾಗುತ್ತಿರುವಾಗ ಕೈಗಾರಿಕಾ ವ್ಯವಸ್ಥೆಯೂ ಬದಲಾಗಬೇಕೆಂಬ ಎಚ್ಚರಿಕೆ.

ಭವಿಷ್ಯದ ವಾಹನ ಎಂದರೆ ಕೇವಲ ಎಂಜಿನ್, ಚಕ್ರ ಮತ್ತು ಲೋಹವಲ್ಲ.ಅದು ಸಾಫ್ಟ್‌ವೇರ್,ಬ್ಯಾಟರಿ,ಸೆಮಿಕಂಡಕ್ಟರ್,ಸಂವೇದಕ, ಕೃತಕ ಬುದ್ಧಿಮತ್ತೆ ಮತ್ತು ರೋಬೋಟಿಕ್ಸ್‌ಗಳ ಸಂಯೋಜನೆಯಾಗಿದೆ.

ಆದ್ದರಿಂದ ಭಾರತವು 'ನಾವು ಕಡಿಮೆ ಬೆಲೆಗೆ ಉತ್ಪಾದಿಸುತ್ತೇವೆ' ಎಂಬ ಹಳೆಯ ಮಾದರಿಗಿಂತ ಮುಂದೆ ಹೋಗಬೇಕು. 'ನಾವು ಭವಿಷ್ಯದ ತಂತ್ರಜ್ಞಾನವನ್ನು




ಉತ್ಪಾದಿಸುತ್ತೇವೆ' ಎಂಬ ಹಂತಕ್ಕೆ ತಲುಪಬೇಕು.

ಕೆಂಪು ಸಮುದ್ರದಿಂದ ಭಾರತದ ಅಡುಗೆ ಮನೆಯವರೆಗೆ

ಹೌತಿ ದಾಳಿಗಳ ಪರಿಣಾಮ ಕೇವಲ ಸೌದಿ ಅರೇಬಿಯಾ ಅಥವಾ ಯೆಮೆನ್‌ಗೆ ಸೀಮಿತವಾಗುವುದಿಲ್ಲ. ಕೆಂಪು ಸಮುದ್ರ ಮತ್ತು ಬಾಬ್ ಅಲ್-ಮಂದಬ್ ಮೂಲಕ ಸಾಗುವ ಜಾಗತಿಕ ವ್ಯಾಪಾರಕ್ಕೆ ತೊಂದರೆ ಉಂಟಾದರೆ ಹಡಗುಗಳು ಪರ್ಯಾಯ ಮಾರ್ಗ ಬಳಸಬೇಕಾಗುತ್ತದೆ. ಅದರಿಂದ ಸಮಯ, ವಿಮೆ ಮತ್ತು ಸಾಗಣೆ ವೆಚ್ಚ ಹೆಚ್ಚಬಹುದು.

ಇಂಧನದ ಬೆಲೆ ಏರಿದರೆ ಅದರ ಪರಿಣಾಮ ಕೈಗಾರಿಕೆಯಿಂದ ಸಾರಿಗೆವರೆಗೆ, ಸಾರಿಗೆಯಿಂದ ಆಹಾರ ವಸ್ತುಗಳವರೆಗೆ ತಲುಪಬಹುದು.

ಅಂದರೆ ಪಶ್ಚಿಮ ಏಷ್ಯಾದ ಯುದ್ಧವು ದೂರದ ದೇಶದ ಸಮಸ್ಯೆಯಲ್ಲ. ಅದರ ಪ್ರತಿಧ್ವನಿ ಭಾರತದ ಪೆಟ್ರೋಲ್ ಬಂಕ್‌ನಲ್ಲೂ, ಕಾರ್ಖಾನೆಯಲ್ಲೂ, ಬಂದರಲ್ಲೂ ಮತ್ತು ಸಾಮಾನ್ಯ ಕುಟುಂಬದ ಖರ್ಚಿನಲ್ಲೂ ಕೇಳಿಸಬಹುದು.

ಭಾರತದ ಮುಂದಿರುವ ದೊಡ್ಡ ಸವಾಲು

ಭಾರತದ ಮುಂದೆ ಮೂರು ದೊಡ್ಡ ಪ್ರಶ್ನೆಗಳಿವೆ.

ಮೊದಲನೆಯದು ಇಂಧನ ಭದ್ರತೆ: ಒಂದು ಅಥವಾ ಎರಡು ದೇಶಗಳ ಮೇಲೆ ಅತಿಯಾದ ಅವಲಂಬನೆ ಅಪಾಯಕಾ-ರಿಯಾಗಬಹುದು. ಪೂರೈಕೆ ಮೂಲಗಳನ್ನು ವೈವಿಧ್ಯಗೊಳಿಸಬೇಕು.

ಎರಡನೆಯದು ರಕ್ಷಣಾ ಸ್ವಾವಲಂಬನೆ: ವಿದೇಶಿ ಸಹಕಾರ ಅಗತ್ಯವಾದರೂ, ನಿರ್ಣಾಯಕ ತಂತ್ರಜ್ಞಾನದಲ್ಲಿ ಸಂಪೂರ್ಣ ಪರಾವಲಂಬನೆ ತಪ್ಪಿಸಬೇಕು.

ಮೂರನೆಯದು ಉತ್ಪಾದನಾ ಸಾಮರ್ಥ್ಯ: ಜಾಗತಿಕ ಪೂರೈಕೆ ಸರಪಳಿಗಳು ಮರುಹೊಂದಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಭಾರತಕ್ಕೆ ಅವಕಾಶವಿದೆ. ಆದರೆ ಅವಕಾಶವನ್ನು ಕೈಗಾರಿಕಾ ಮೂಲಸೌಕರ್ಯ, ಕೌಶಲ್ಯಮತ್ತುತಂತ್ರಜ್ಞಾನದಿಂದಮಾತ್ರಫಲವಾಗಿಪರಿವರ್ತಿಸಬಹುದು.

ಜಗತ್ತು ಬದಲಾಗುತ್ತಿದೆ; ಭಾರತವೂ ಬದಲಾಗಬೇಕು

ಒಮ್ಮೆ ವಿಶ್ವ ರಾಜಕಾರಣವನ್ನು ವಾಷಿಂಗ್ಟನ್ ಮತ್ತು ಮಾಸ್ಕೋ ನಿರ್ಧರಿಸುತ್ತಿದ್ದರೆ, ನಂತರ ವಾಷಿಂಗ್ಟನ್ ಕೇಂದ್ರಿತ ಏಕಧ್ರುವೀಯ ವ್ಯವಸ್ಥೆ ಬಲವತ್ತಾಯಿತು. ಈಗ ಚೀನಾ, ಭಾರತ, ರಷ್ಯಾ, ಯುರೋಪ್, ಮಧ್ಯಪ್ರಾಚ್ಯ ಮತ್ತು ಗ್ಲೋಬಲ್ ಸೌತ್‌ನ ವಿವಿಧ ಶಕ್ತಿಗಳು ತಮ್ಮದೇ ಹಿತಾಸಕ್ತಿಗಳೊಂದಿಗೆ ಮುಂದೆ ಬರುತ್ತಿವೆ.

ಇದು ಯಾರ ಜಯ, ಯಾರ ಸೋಲು ಎಂಬ ಸರಳ ಆಟವಲ್ಲ

ಇದು ಯಾರ ಬಳಿ ಆರ್ಥಿಕ ಶಕ್ತಿ ಇದೆ? ಯಾರ ಬಳಿ ತಂತ್ರಜ್ಞಾನ ಇದೆ? ಯಾರ ಬಳಿ ಇಂಧನ ಇದೆ? ಯಾರ ಬಳಿ ಆಹಾರ ಭದ್ರತೆ ಇದೆ? ಯಾರ ಬಳಿ ರಕ್ಷಣಾ ಸಾಮರ್ಥ್ಯ ಇದೆ? ಮತ್ತು ಯಾರಿಗೆ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ ರಾಜತಾಂತ್ರಿಕ ಸಾಮರ್ಥ್ಯ ಇದೆ? ಎಂಬ ಪ್ರಶ್ನೆಗಳ ಯುಗ.

ಈ ಹೊಸ ಜಗತ್ತಿನಲ್ಲಿ ಭಾರತವು ಯಾವುದೇ ಒಂದು ಶಕ್ತಿಯ ನೆರಳಿನಲ್ಲಿ ನಿಲ್ಲಬೇಕಾದ ಅಗತ್ಯವಿಲ್ಲ. ಆದರೆ ಯಾರನ್ನೂ ಶತ್ರುವೆಂದು ಮಾಡಿಕೊಂಡು ಒಂಟಿಯಾಗುವ ಅಗತ್ಯವೂ ಇಲ್ಲ.

ಸ್ನೇಹ ಎಲ್ಲರೊಂದಿಗಿರಲಿ; ಆದರೆ ಅವಲಂಬನೆ ಬೇಡ.

ಭಾರತದ ಮುಂದಿನ ದಾರಿ ಇದೇ ಆಗಬೇಕು

ರಾಷ್ಟ್ರೀಯ ಹಿತಾಸಕ್ತಿಯ ಪ್ರಶ್ನೆಯಲ್ಲಿ ಭಾವನೆಗಿಂತ ವಿವೇಕ, ಘೋಷಣೆಗಿಂತ ಉತ್ಪಾದನೆ, ಆಮದುಗಿಂತ ಸ್ವಾವಲಂಬನೆ ಮತ್ತು ಬಣ ರಾಜಕಾರಣಕ್ಕಿಂತ ಕಾರ್ಯತಂತ್ರದ ಸ್ವಾಯತ್ತತೆ ಮುಖ್ಯ.

ಜಗತ್ತು ಇಂದು ನಮಗೆ ಒಂದು ಕಠಿಣ ಪಾಠ ಕಲಿಸುತ್ತಿದೆ: ಮುರಿದ ಒಪ್ಪಂದದ ಸಮಯದಲ್ಲಿ ಸ್ನೇಹಿತನ ಮಾತಿಗಿಂತ ಸ್ವಂತ ಸಾಮರ್ಥ್ಯವೇ ಕೆಲಸಕ್ಕೆ ಬರುತ್ತದೆ.

ಬಿಕ್ಕಟ್ಟಿನ ಸಮಯದಲ್ಲಿ ಘೋಷಣೆಗಿಂತ ಉತ್ಪಾದನಾ ಸಾಮರ್ಥ್ಯವೇ ದೇಶವನ್ನು ಉಳಿಸುತ್ತದೆ.

ಯುದ್ಧದ ಸಮಯದಲ್ಲಿ ಖರೀದಿಸಿದ ಶಸ್ತ್ರಾಸ್ತ್ರಕ್ಕಿಂತ ಸ್ವದೇಶಿ ತಂತ್ರಜ್ಞಾನವೇ ದೀರ್ಘಕಾಲದ ಭದ್ರತೆಯನ್ನು ನೀಡುತ್ತದೆ.

ಹೀಗಾಗಿ ಭಾರತದ ಗುರಿ ಕೇವಲ 'ವಿಶ್ವಗುರು' ಎಂಬ ಘೋಷಣೆಯಾಗಬಾರದು.

ವಿಶ್ವದ ಯಾವುದೇ ಬಿಕ್ಕಟ್ಟಿನಲ್ಲೂ ತನ್ನ ನಿರ್ಧಾರವನ್ನು ತಾನೇ ತೆಗೆದುಕೊಳ್ಳಬಲ್ಲ ಆರ್ಥಿಕ, ತಾಂತ್ರಿಕ, ರಕ್ಷಣಾತ್ಮಕ ಮತ್ತು ರಾಜತಾಂತ್ರಿಕ ಶಕ್ತಿಯಾಗಿ ಭಾರತ ರೂಪುಗೊಳ್ಳುವುದುಅದೇ ನಿಜವಾದ ಸ್ವಾವಲಂಬನೆಯ ಅರ್ಥ.

# ಇಂಡಿ, ಚಡಚಣ & ತಾಳಿಕೋಟೆ ತಾಲೂಕುಗಳನ್ನು ಬರಪೀಡಿತವೆಂದು ಪರಿಗಣಿಸಲು ಕ್ರಮ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಬರ ನಿರ್ವಹಣೆ ಕೈಪಿಡಿ 2020 ರ ಮೌಲ್ಯಮಾಪನ ಮಾನದಂಡಗಳ ಪ್ರಕಾರ ಇಂಡಿ, ಚಡಚಣ ಮತ್ತು ತಾಳಿಕೋಟೆ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಪರಿಗಣಿಸಲು ಕ್ರಮಕೈಗೊಳ್ಳಲಾಗುತ್ತಿದೆ ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ತಿಳಿಸಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಸೋಮವಾರದೊಳಗೆ ಈ ನಾಲ್ಕು ತಾಲೂಕುಗಳ ಗ್ರೌಂಡ್ ಟ್ರೂಥಿಂಗ್ ಕಾರ್ಯವನ್ನು ಪೂರ್ಣಗೊಳಿಸಲಾಗುವುದು. ಅದರ ಆಧಾರದ ಮೇಲೆ ಈ ನಾಲ್ಕು ತಾಲೂಕುಗಳ ಅಂತಿಮ ಅಧಿಸೂಚನೆಯನ್ನು ಸರಕಾರದಿಂದ ಹೊರಡಿಸಲಾಗುವುದು ಎಂದು ತಿಳಿಸಿದ್ದಾರೆ.

ಅಲ್ಲದೇ, ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸುವ ಹಂತಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡಿರುವ ಸಚಿವರು, ನಿರಂತರವಾಗಿ ಮೂರು ವಾರಗಳ ಒಣ ಹವೆ (Dry Spell), ಉಪಗ್ರಹ ದತ್ತಾಂಶ ಮತ್ತು ರಿಮೋಟ್ ಸೆನ್ಸಿಂಗ್ ದತ್ತಾಂಶಗಳ ಆಧಾರಿತ ಪರಿಣಾಮದ ಸೂಚಕಗಳು ಮಾನದಂಡಗಳ ಆಧಾರದ ಮೇಲೆ, ಸರಕಾರದ ಮಟ್ಟದಲ್ಲಿ ಸಮಗ್ರ ಬರ ಮೌಲ್ಯಮಾಪನ (ಮಧ್ಯಮ ಅಥವಾ ತೀವ್ರ ವರ್ಗ) ಮಾಡಿ ಅರ್ಹ ತಾಲೂಕುಗಳನ್ನು ಗುರುತಿಸಲಾಗುತ್ತದೆ.

ಅದನ್ನು ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯ ಸಚಿವ ಸಂಪುಟ ಉಪ–ಸಮಿತಿಯ ಮುಂದೆ ಮಂಡಿಸಲಾಗುತ್ತದೆ. ಉಪ–ಸಮಿತಿಯು ತಾಲೂಕುಗಳ ಪಟ್ಟಿಯನ್ನು ಅನುಮೋದಿಸಿ, ಮುಂದಿನ ಹಂತವಾದ ಕ್ಷೇತ್ರ ಪರಿಶೀಲನೆಗೆ (ಉಡಿಂಣಟಿಜ ಖಿಡಿಣಣಛಿಟಿರ) ಅಧಿಸೂಚನೆ ಹೊರಡಿಸಲಾಗುತ್ತದೆ.

ಅಧಿಸೂಚನೆ ಹೊರಡಿಸಲಾದ ತಾಲೂಕುಗಳಲ್ಲಿ ಕ್ಷೇತ್ರ ಪರಿಶೀಲನೆಯನ್ನು ಗ್ರೌಂಡ್ ಟ್ರೂಥಿಂಗ್ ಪ್ ಮೂಲಕ ಮಾಡಲಾಗುತ್ತದೆ. ಕೃಷಿ, ತೋಟಗಾ–ರಿಕೆ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಗ್ರೌಂಡ್ ಟ್ರೂಥಿಂಗ್ ಪ್ ನಿಂದ ಯಾದೃಚ್ಛಿಕವಾಗಿ



(random) ಆಯ್ಕೆಯಾದ ಗ್ರಾಮಗಳ ಸರ್ವೆ ನಂಬರ್‌ಗಳಲ್ಲಿ ನಾಲ್ಕು ದಿನಗಳೊಳಗೆ ಬೆಳೆ ಹಾನಿ ಮೌಲ್ಯಮಾಪನ ನಡೆಸುತ್ತಾರೆ. ಗ್ರೌಂಡ್ ಟ್ರೂಥಿಂಗ್ ವರದಿಯ ಆಧಾರದ ಮೇಲೆ ತಾಲೂಕನ್ನು ಮಧ್ಯಮ ಅಥವಾ ತೀವ್ರ ಬರಪೀಡಿತ ಎಂದು ವರ್ಗೀಕ–

## ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ

ರಿಸಲಾಗುತ್ತದೆ. ಇದನ್ನು ಸಚಿವ ಸಂಪುಟದ ಮುಂದೆ ಮಂಡಿಸಿ ಅಂತಿಮ ಬರ ಅಧಿಸೂಚನೆ_ ಹೊರಡಿಸಲಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಮೊದಲ ಮತ್ತು ಎರಡನೇ ಪಟ್ಟಿಯಲ್ಲಿರುವ ತಾಲೂಕುಗಳಾದ ವಿಜಯಪುರ, ಕೊಲ್ಹಾರ,ನಿಡಗುಂದಿ, ಬಸವನ ಬಾಗೇವಾಡಿ, ಬಬಲೇಶ್ವರ, ತಿಕೋಟಾ ತಾಲೂಕುಗಳಲ್ಲಿ ಗ್ರೌಂಡ್ ಟ್ರುಥಿಂಗ್ ಕಾರ್ಯ ಮುಕ್ತಾಯಗೊಂಡು ಅಂತಿಮವಾಗಿ ತೀವ್ರ ಬರಪೀಡಿತ ತಾಲೂಕುಗಳೆಂದು ಸರಕಾರದಿಂದ ಅಧಿಸೂಚಿಸಲಾಗಿದೆ.

ಸಿಂದಗಿ, ಆಲಮೇಲ, ದೇವರ ಹಿಪ್ಪರಗಿ ಮತ್ತು ಮುದ್ದೇಬಿಹಾಳ ತಾಲೂಕುಗಳನ್ನು ಗ್ರೌಂಡ್ ಟ್ರೂಥಿಂಗ್‌ಗಾಗಿ ಅಧಿಸೂಚಿಸಲಾಗಿದೆ. ಗ್ರೌಂಡ್ ಟ್ರೂಥಿಂಗ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಸೋಮವಾರದೊಳಗೆ ಈ ನಾಲ್ಕು ತಾಲೂಕುಗಳ ಗ್ರೌಂಡ್ ಟ್ರೂಥಿಂಗ್ ಕಾರ್ಯವನ್ನು ಪೂರ್ಣಗೊಳಿಸಲಾಗುವುದು. ಅದರ ಆಧಾರದ ಮೇಲೆ ಈ ನಾಲ್ಕು ತಾಲೂಕುಗಳ ಅಂತಿಮ ಅಧಿಸೂಚನೆಯನ್ನು ಸರಕಾರದಿಂದ ಹೊರಡಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.



# ಗ್ರಾಮೀಣರ ಜೀವ ಕಲೆ ಜಾನಪದ :ಶಿವಲೀಲಾ ಬೂಟಾಳೆ

■ ಉದಯರಶ್ಮಿ ದಿನಪತ್ರಿಕೆ

ಅಥಣಿ: ಗ್ರಾಮೀಣ ಜನರ ಕಸಬು ಕೂಲಿ ಹಾಗೂ ಒಕ್ಕಲುತನ, ದಿನಪೂರ್ತಿ ದುಡಿಬಂದು

ರಾತ್ರಿ ಸಮಯದಲ್ಲಿ ಮಕ್ಕಳೊಂದಿಗೆ ಪುರಾತನ ಕತೆ ಹಾಗೂ, ನೃತ್ಯ, ವಿವಿಧ ಪ್ರಕಾರದ ಮೂಲ ಕಲೆಗಳು ಹೇಳುತ್ತಾ ತಮ್ಮ್ ದಣಿವನ್ನು ದುರುಮಾಡಲು ಜೀವ ಕಳೆ ತುಂಬಲು ಜಾನಪದ ಕಲೆಗಳು ಗ್ರಾಮೀಣ ಜನರ ಜೀವನ ಜೀವಾಳ ಎಂದು ಪುರಸಭೆ ಅಧ್ಯಕ್ಷೆ ಶಿವಲೀಲಾ ಎಸ್ ಬೂಟಾಳೆ ಹೇಳಿದರು.

ಅವರು ನಗರದ ಆದರ್ಶನಗರದ ಸರ್ ಎಂ ವಿಶ್ವೇಶ್ವರಯ್ಯ ಸಾಂಸ್ಕೃತಿಕ ಭವನದಲ್ಲಿ ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು. ಮತ್ತು ಶ್ರೀ ಮುರಸಿದ್ದೇಶ್ವರ ಕಲಾ ಪೋಷಕ ಸಂಘ ಮುರಗುಂಡಿ ಹಾಗೂ ಸಪ್ತಸ್ವರ ಸಂಗೀತ ಕಲಾ ಬಳಗ ಇವರು ಸಂಯುಕ್ತ ಆಶ್ರಯದಲ್ಲಿ ಜರುಗಿದ ಹಳ್ಳಿ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಾವೆಲ್ಲ ಪಾಶ್ಚಿಮಾತ್ಯ ಕಲೆಗಳ ಹೊಡೆತಕ್ಕೆ ಮಾರುಹೋಗಿ ಮೂಲ ಜಾನಪದ ಕಲೆಗಳಾದ ಸೋಭಾನ ಪದಗಳು, ಕರಬಲ್, ರಿವಾಯತ್, ಸಮುದಾಯದ ನೃತ್ಯ, ಕೋಲಾಟ, ಬಿಸುಕಲ್ಲಿನ ಪದಗಳು, ಡೊಳ್ಳು ಕುಣಿತ, ಡೊಳ್ಳಿನ ಪದಗಳು, ಇಂತಹ ಹಲವಾರು ಕಲೆಗಳು ಮಾಯವಾಗುವ ಹಂತದಲ್ಲಿ ಇದ್ದಾವೆ. ಕಾರಣ ಈ ಕಲೆಗಳು ನಸಿಸಿ ಹೋಗಬಾರದೆಂದು ಈ ಕಲೆಗಳಿಗೆ ಜೀವ ತುಂಬುತ್ತಿರುವ ಜಾನಪದ ಅಕಾಡೆಮಿಗೆ

ಅಭಿನಂದನೆಗಳು ಸಲ್ಲಿಸಿದರು.

ಈ ಸಂಧರ್ಭದಲ್ಲಿ ಡಾ. ಕಾಡಯ್ಯ ಹಿರೇಮಠ ಮಹಾ ಸ್ವಾಮಿಗಳು ಹಾಗೂ ಶೀಲಾ ಅಮ್ಮನವರು ಸಾನಿಧ್ಯವಹಿಸಿದ್ದರು. ಜ್ಯೋತಿ ಪ್ರಜ್ವಲನೆಯನ್ನು ಪುರಸಭೆಯ ಉಪಾಧ್ಯಕ್ಷೆ ಭುವನೇಶ್ವರಿ ಯಂಕಚ್ಚಿ, ಹ್ಯೂಮನ್ ರೈಟ್ಸ್ ರಾಜ್ಯ ಪ್ರದಾನ ಕಾರ್ಯದರ್ಶಿ ಪ್ರೀತಿ ನಾಯಿಕ, ಜಿಲ್ಲಾ ಅಧ್ಯಕ್ಷೆ ಶ್ರೀದೇವಿ ಗಡದೆ, ಕೈಲಾಸ ಮಾದಬಾವಿ, ಅನೀಲ್ ಕಾಂಬಳೆ, ಪುಷ್ಪ ಕಾಂಬಳೆ ಪ್ರೀತಿ ಪೂಜಾರಿ, ಅಲ್ಲವುದ್ದಿನ್ ಶೇಕ್, ಶಿವು ಕೋಳಿ, ರಾಜೇಶ್ ಮಕನದಾರ, ರವಿ ಹಾದಿಮನಿ ಅಪ್ಪು ಪೂಜಾರಿ, ಕುಮಾರ ಶೇಮಡೆ, ಅಜೀತ್ ಬೆಳ್ಳಂಕಿ, ಮುರಗೆಪ್ಪ ಪಾಟೀಲ್, ಕುಮಾರ ಗಸ್ತಿ, ಉಪಸ್ಥಿತರಿದ್ದರು.

ಹಳ್ಳಿ ಹಬ್ಬ ಕಾರ್ಯಕ್ರಮದಲ್ಲಿ ಯುಗಾರ ಖುರ್ದ್, ದೇವರದ್ದೇರಟ್ಟಿ, ಅಡಹಳ್ಳಿ, ಬಡಚಿ, ಕೋಹಳ್ಳಿ, ಸುಟ್ಟಟ್ಟಿ, ಮುರಗುಂಡಿ, ಕೆಂಪವಾಡ, ಅಥಣಿ, ಕ್ರಷ್ಣ ಕಿತ್ತೂರ, ಐನಾಪುರ ಕಾಗವಾಡ, ಮಸರಗುಪ್ಪಿ, ತೆವರಟ್ಟಿ, ತಾಂವಸಿ, ತಾಲೂಕಿನ ವಿವಿಧ ಗ್ರಾಮಗಳ 27 ತಂಡಗಳು ಭಾಗಿಯಾಗಿದ್ದವು. ಕಾರ್ಯಕ್ರಮವನ್ನು ಸುರೇಶ ವಾಘಮೋಡೆ ನಿರೂಪಿಸಿದರು.



# 10 ತಾಸು 30 ನಿಮಿಷಗಳಲ್ಲಿ 36 ಎಕರೆ ಹೊಲ ಹರಗಿದ ಎತ್ತುಗಳು

■ ಉದಯರಶ್ಮಿ ದಿನಪತ್ರಿಕೆ

ತಿಕೋಟಾ: ತಾಲೂಕಿನ ಹೊನವಾಡ ಗ್ರಾಮದ ಕೃಷಿ ಕ್ಷೇತ್ರದಲ್ಲಿ ಯಂತ್ರಗಳ ಬಳಕೆ ಹೆಚ್ಚಾಗುತ್ತಿರುವ ಈ ದಿನಮಾನಗಳಲ್ಲಿ, ಎತ್ತುಗಳ ಮೂಲಕವೇ ಕೇವಲ 10 ತಾಸು 30 ನಿಮಿಷಗಳಲ್ಲಿ ಬರೋಬ್ಬರಿ 36 ಎಕರೆ ಜಮೀನನ್ನು ಹರಗಿರುವುದು ಗಮನ ಸೆಳೆದಿದೆ.

ತಿಕೋಟಾ ತಾಲ್ಲೂಕಿನ ಹೊನವಾಡದ ಮಹೇಶ ಒಡೆಯರ್ ರೈತರೊಬ್ಬರ ಜಮೀನಿನಲ್ಲಿ ನಡೆದ ಈ ವಿಶೇಷ ಕೃಷಿ ಕಾರ್ಯ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಸಾಂಪ್ರದಾಯಿಕ ಕೃಷಿ ಪದ್ಧತಿಯಲ್ಲಿ ಪ್ರಮುಖ ಪಾತ್ರ ವಹಿಸುವ ದಾನಯ್ಯ ಗೂಗವಾಡ ಅವರ ಎತ್ತುಗಳು ನಿರಂತರವಾಗಿ ಹೊಲ ಹರಗಿ, ರೈತರ ಶ್ರಮಕ್ಕೆ ಸಾಥ್ ನೀಡಿವೆ. ಬೆಳಗ್ಗಿನಿಂದ ಆರಂಭವಾದ ಉಳುಮೆ ಕಾರ್ಯವು ಸುಮಾರು 10 ತಾಸು 30 ನಿಮಿಷಗಳ ಕಾಲ ನಡೆಯಿತು. ಈ ಅವಧಿಯಲ್ಲಿ ಒಟ್ಟು 36 ಎಕರೆ ಜಮೀನನ್ನು ಹರಗಲಾಗಿದೆ ಎಂದು ರೈತರು ತಿಳಿಸಿದ್ದಾರೆ.

ಕೃಷಿಯಲ್ಲಿ ಆಧುನಿಕ ಯಂತ್ರೋಪಕರಣಗಳ ಬಳಕೆ ಹೆಚ್ಚುತ್ತಿರುವ ಸಂದರ್ಭದಲ್ಲಿ, ಎತ್ತುಗಳ ಮೂಲಕ ಇಷ್ಟು ದೊಡ್ಡ ಪ್ರಮಾಣದ ಜಮೀನನ್ನು ಕಡಿಮೆ ಅವಧಿಯಲ್ಲಿ ಹರಗಿರುವುದು ವಿಶೇಷವಾಗಿದೆ. ಎತ್ತುಗಳ ಶಕ್ತಿ, ತರಬೇತಿ ಹಾಗೂ ಅವುಗಳೊಂದಿಗೆ ದುಡಿಯುವ ರೈತರ ಅನುಭವ ಈ ಸಾಧನೆಗೆ ಪ್ರಮುಖ ಕಾರಣವಾಗಿದೆ.

ಈ ಅಪರೂಪದ ಕೃಷಿ ಕಾರ್ಯವನ್ನು ಕಂಡ ಗ್ರಾಮಸ್ಥರು ಹಾಗೂ ರೈತರು ಮೆಚ್ಚುಗೆ ವ್ಯಕ್ತಪಡಿಸಿದರು. ಸಾಂಪ್ರದಾಯಿಕ ಕೃಷಿ ಪದ್ಧತಿಯ ಮಹತ್ವವನ್ನು ನೆನಪಿಸುವಂತಿರುವ ಈ ಘಟನೆ, ರೈತರ ಪರಿಶ್ರಮ ಮತ್ತು ಎತ್ತುಗಳ ಕೃಷಿ ಸೇವೆಯನ್ನು ಮತ್ತೊಮ್ಮೆ ಎತ್ತಿ ತೋರಿಸಿದೆ ಈ ಸಂದರ್ಭದಲ್ಲಿ ಉಳಮೆ ಮಾಡಿದವರು

**ಬಸವರಾಜ ಸರಸ್ವತಿ,**
**ಪ್ರವೀಣ ಕಲಘಟಗಿ,**
**ನಾಗು ಸಿದ್ದನಾಥ,**
**ಸುನೀಲ ಗುಗ್ವಾಡ,**
**ಬಸವರಾಜ ಹಂಜಿ,**

ಜ್ಞಾನೇಶ್ವರ ಜಾಧವ, ಪಿಂಟು ಸಿದ್ನಾಥ, ಮತ್ತಿತರರು ಇದ್ದರು.

# ಪ್ರಶಾಂತ ಕುಲಕರ್ಣಿ ಶಿಕ್ಷಣ ಸೇವೆಗೆ ರಾಜ್ಯಮಟ್ಟದ ಗೌರವ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಶಿಕ್ಷಕರೊಬ್ಬರ ನಿಸ್ವಾರ್ಥ ಸೇವೆ, ವಿದ್ಯಾರ್ಥಿಗಳ ಮೇಲಿನ ಕಾಳಜಿ ಹಾಗೂ ಶಿಕ್ಷಣ ಕ್ಷೇತ್ರದ ಬದ್ಧತೆಗೆ ದೊರೆಯುವ ಗೌರವವು ಕೇವಲ ಒಬ್ಬ ವ್ಯಕ್ತಿಯ ಸಾಧನೆಯಾಗದೆ, ಇಡೀ ಶಿಕ್ಷಣ ಸಮುದಾಯದ ಹೆಮ್ಮೆಯಾಗುತ್ತದೆ. ಅಂತಹ ಹೆಮ್ಮೆಯ ಕ್ಷಣಕ್ಕೆ ಸಿಂದಗಿಯ ಶ್ರೀ ಪದ್ಮರಾಜ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ಶ್ರೀ ಪ್ರಶಾಂತ ಚಿದಂಬರ ಕುಲಕರ್ಣಿ ಅವರು ಪಾತ್ರರಾಗಿದ್ದಾರೆ.

ಬೆಂಗಳೂರಿನ ಟೌನ್ ಹಾಲ್‌ನಲ್ಲಿ ಸೆ.20ರಂದು ನಡೆದ ಕರ್ನಾಟಕ ಪ್ರೆಸ್ ಕ್ಲಬ್‌ನ 2026ನೇ ಸಾಲಿನ ರಾಜ್ಯ ಮಟ್ಟದ 'ಶಿಕ್ಷಣ ಸೇವಾ ರತ್ನ' ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಪ್ರಶಾಂತ ಚಿದಂಬರ ಕುಲಕರ್ಣಿ ಅವ–ರಿಗೆ 'ಶಿಕ್ಷಣ ಸೇವಾ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶಿಕ್ಷಣವೆಂದರೆ ಕೇವಲ ಪಠ್ಯಪುಸ್ತಕದ ಜ್ಞಾನವನ್ನು



ನೀಡುವುದಲ್ಲ; ವಿದ್ಯಾರ್ಥಿಯೊಳಗಿನ ಪ್ರತಿಭೆಯನ್ನು ಗುರುತಿಸಿ, ಆತ್ಮವಿಶ್ವಾಸ ತುಂಬಿ, ಬದುಕಿನ ದಾ–ರಿಯನ್ನು ತೋರಿಸುವ ಜವಾಬ್ದಾರಿಯೂ ಹೌದು. ಈ ಆಶಯದೊಂದಿಗೆ ಶಿಕ್ಷಕರಾಗಿ ತಮ್ಮ ವೃತ್ತಿಜೀವನದಲ್ಲಿ ಶೈಕ್ಷಣಿಕ ಚಟುವಟಿಕೆಗಳು, ವಿದ್ಯಾರ್ಥಿಗಳ ಮಾರ್ಗದರ್ಶನ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ನೆರವಾಗುವಂತಹ ವಿವಿಧ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಪ್ರಶಾಂತ ಕುಲಕರ್ಣಿ ಅವರ ಸೇವೆಯನ್ನು ಗುರುತಿಸಿ ಈ ರಾಜ್ಯಮಟ್ಟದ ಗೌರವ ನೀಡಲಾಗಿದೆ. ಪ್ರಶಸ್ತಿ ಸ್ವೀಕರಿಸಿದ ಸಂದರ್ಭದಲ್ಲಿ ಮಾತನಾಡಿದ ಅವರು, "ಈ ಗೌರವ ನನ್ನೊಬ್ಬರ ಸಾಧನೆಯಲ್ಲ; ನನ್ನೊಂದಿಗೆ ಹೆಜ್ಜೆ ಹಾಕಿದ ವಿದ್ಯಾರ್ಥಿಗಳು, ಸಹೋದ್ಯೋಗಿಗಳು, ಸಂಸ್ಥೆಯ ಆಡಳಿತ ಮಂಡಳಿ ಹಾಗೂ ನನ್ನ ಶೈಕ್ಷಣಿಕ ಪಯಣದಲ್ಲಿ ಪ್ರೋತ್ಸಾಹ ನೀಡಿದ ಎಲ್ಲರಿಗೂ ಸಲ್ಲುತ್ತದೆ. ಈ ಪ್ರಶಸ್ತಿ ಮುಂದಿನ ದಿನಗಳಲ್ಲಿ ಇನ್ನಷ್ಟು ಜವಾಬ್ದಾರಿಯಿಂದ ಸೇವೆ ಸಲ್ಲಿಸಲು ಪ್ರೇರಣೆ ನೀಡಿದೆ" ಎಂದು ಸಂತಸ ವ್ಯಕ್ತಪಡಿಸಿದರು.

ಸಿಂದಗಿಯ ಶಿಕ್ಷಕರೊಬ್ಬರಿಗೆ ರಾಜ್ಯಮಟ್ಟದ 'ಶಿಕ್ಷಣ ಸೇವಾ ರತ್ನ' ಪ್ರಶಸ್ತಿ ದೊರೆತಿರುವುದು ಸ್ಥಳೀಯ ಶಿಕ್ಷಣ ವಲಯದಲ್ಲಿ ಸಂತಸ ಮೂಡಿಸಿದ್ದು, ಶ್ರೀ ಪದ್ಮರಾಜ ಶಿಕ್ಷಣ ಮಹಾವಿದ್ಯಾಲಯದ ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಗಣ್ಯರು ಪ್ರಶಾಂತ ಚಿದಂಬರ ಕುಲಕರ್ಣಿ ಅವರನ್ನು ಅಭಿನಂದಿಸಿದ್ದಾರೆ.

### ಪೆಟ್ರೋಲ್ ಬಂಕ್ ಮಾಲೀಕನಿಂದ ಗುಂಡು ಹಾರಿಸಿದ ಆರೋಪ । ಆರೋಪಿ ಪೋಲೀಸರ ವಶಕ್ಕೆ

# ಮಟ್ಟಿಹಾಳದಲ್ಲಿ ಗುಂಡಿನ ದಾಳಿ! :ಇಬ್ಬರಿಗೆ ಗಾಯ

■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ವಿಜಯಪುರ ಜಿಲ್ಲೆಯಲ್ಲಿ ಮತ್ತೆ ಗುಂಡಿನ ಮೊರೆತ ಕೇಳಿ ಬಂದಿದ್ದು, ಕೊಲ್ಹಾರ ಪೊಲೀಸ್ ಠಾಣೆ ವ್ಯಾಪ್ತಿಯ ಮಟ್ಟಿಹಾಳ ಗ್ರಾಮದಲ್ಲಿ ರವಿವಾರ ಗುಂಡಿನ ದಾಳಿ ನಡೆದಿರುವ ಘಟನೆ ನಡೆದಿದ್ದು ಘಟನೆಯಲ್ಲಿ ಸುಖದೇವ ಚಲವಾದಿ (30) ಹಾಗೂ ರಾಜು ಚಲವಾದಿ (40) ಗಾಯಗೊಂಡಿದ್ದಾರೆ ಎಂದು ಪ್ರಾಥಮಿಕ ಮಾಹಿತಿ ತಿಳಿಸಿದೆ. ಮಟ್ಟಿಹಾಳ ಗ್ರಾಮದ ಪೆಟ್ರೋಲ್ ಬಂಕ್‌ಗೆ ಸುಖದೇವ ಚಲವಾದಿ ಅವರು ತಮ್ಮ ಸ್ನೇಹಿತ ರಾಜು ಚಲವಾದಿ ಅವರೊಂದಿಗೆ ತೆರಳಿದ್ದರು. ಈ ವೇಳೆ ಪೆಟ್ರೋಲ್ ಬಂಕ್ ಮಾಲೀಕ ಸಂಗಪ್ಪ ಪೂಜಾರಿ (48) ಹಾಗೂ ಇಬ್ಬರ ನಡುವೆ ಯಾವುದೋ ವಿಚಾರಕ್ಕೆ ಸಂಬಂಧಿಸಿದಂತೆ ವಾಗ್ವಾದ ನಡೆದಿದೆ ಎನ್ನಲಾಗಿದೆ.

ವಾಗ್ವಾದದ ಬಳಿಕ ಸಂಗಪ್ಪ ಪೂಜಾರಿ ಅವರು ತಮ್ಮ ಪರವಾನಗಿ ಹೊಂದಿರುವ ಪಿಸ್ತೂಲ್‌ನಿಂದ ಗುಂಡು ಹಾ–ರಿಸಿದ್ದಾರೆ ಎಂದು ಪ್ರಾಥಮಿಕವಾಗಿ ತಿಳಿದುಬಂದಿದೆ. ಈ ವೇಳೆ ಸುಖದೇವ ಅವರಿಗೆ ಗುಂಡೇಟಿನಿಂದ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ರಾಜು ಚಲವಾದಿ ಅವರಿಗೂ ಗಾಯಗಳಾಗಿರುವ ಮಾಹಿತಿ ಲಭ್ಯವಾಗಿದೆ.



ಘಟನೆಯ ಮಾಹಿತಿ ಪಡೆದ ಪೊಲೀಸರು ಸ್ಥಳಕ್ಕೆ ಧಾವಿಸಿ ಆರೋಪಿ ಸಂಗಪ್ಪ ಪೂಜಾರಿ ಅವರನ್ನು ವಶಕ್ಕೆ ಪಡೆದಿದ್ದಾರೆ. ಘಟನಾ ಸ್ಥಳದಲ್ಲಿ ಎಸ್‌ಒಸಿಒ ತಂಡ ಪರಿಶೀಲನೆ ನಡೆಸುತ್ತಿದ್ದು, ಗುಂಡಿನ ದಾಳಿಗೆ ಸಂಬಂಧಿಸಿದ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುತ್ತಿದೆ. ಗುಂಡಿನ ದಾಳಿಗೆ ನಿಖರ ಕಾರಣವೇನು ಹಾಗೂ ಘಟನೆಯ ವೇಳೆ ನಿಖರವಾಗಿ ಏನಾಯಿತು ಎಂಬುದರ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ತನಿಖೆಯ ಬಳಿಕ ಹೆಚ್ಚಿನ ಮಾಹಿತಿ ತಿಳಿದುಬರಬೇಕಿದೆ. ಘಟನೆ ಕೊಲ್ಹಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

### ಹಡಲಸಂಗ ಗ್ರಾಮದಲ್ಲಿ ಹಲವು ಕಾಮಗಾರಿಗಳಿಗೆ ಚಾಲನೆ ನೀಡಿದ ಶಾಸಕ ಯಶವಂತರಾಯಗೌಡ ಪಾಟೀಲ

# ಹಡಲಸಂಗದ ಅಭಿವೃದ್ಧಿಗೆ ಪಾಟೀಲರ 'ಪವರ್ ಪಂಚ್'

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಇಂಡಿ ವಿಧಾನಸಭಾ ಕ್ಷೇತ್ರದ ಹಡಲಸಂಗ ಗ್ರಾಮವು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುತ್ತಿದ್ದು, ಗ್ರಾಮೀಣ ಭಾಗದ ಜನರ ಅಗತ್ಯಗಳಿಗೆ ಸ್ಪಂದಿಸಿ ಮೂಲಸೌಕರ್ಯ ಕಲ್ಪಿಸಲು ಆದ್ಯತೆ ನೀಡಲಾಗುತ್ತಿದೆ

ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ಹಡಲಸಂಗ ಗ್ರಾಮದ ವಿಜಯನಗರ ತಾಂಡಾದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕ.ವಿ.ಪ್ರ.ನಿ.ನಿ.) ವತಿಯಿಂದ 110/11 ಕೆ.ವಿ. ವಿದ್ಯುತ್ ಉಪಕೇಂದ್ರ ಕಾಮಗಾರಿಗೆ ಚಾಲನೆ ನೀಡಿ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ಹಾಗೂ ಪೂರ್ಣಗೊಂಡ ಕಾಮಗಾರಿಗಳ ಲೋಕಾರ್ಪಣೆ ನೆರವೇರಿಸಿ ಅವರು ಮಾತನಾಡಿದರು.

ವಿಜಯನಗರ ಪ್ರಕಾಶ ಮಹಾರಾಜ ಹಾಗೂ ಧರ್ಮ ಮಹಾರಾಜರ ದಿವ್ಯ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಿತು.

ಸೊನಕನಹಳ್ಳಿ, ಹಡಲಸಂಗ, ಜಿಗಜಿಣಗಿ, ಸಾತಲಗಾಂವ ಸೇರಿದಂತೆ ಸುತ್ತಮುತ್ತಲಿನ ಹಲವು ಗ್ರಾಮಗಳ ರೈತರು ಹಾಗೂ ಸಾರ್ವಜನಿಕರು ನೀರು, ವಿದ್ಯುತ್, ಶಿಕ್ಷಣ ಮತ್ತು ಉತ್ತಮ ರಸ್ತೆ ಸಂಪರ್ಕದ ಕೊರತೆಯಿಂದ ಸಮಸ್ಯೆ ಎದುರಿಸುತ್ತಿದ್ದರು. ಜನರ ಬಹುದಿನಗಳ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಅಗತ್ಯ ಕಾಮಗಾರಿಗಳನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ. ಜನರ ಆಶಯಗಳನ್ನು ಈಡೇರಿಸುವುದು ಜನಪ್ರತಿನಿಧಿಯಾಗಿ ನನ್ನ ಕರ್ತವ್ಯವಾಗಿದೆ ಎಂದು ಹೇಳಿದರು.

ಹಡಲಸಂಗದಲ್ಲಿ ವಿದ್ಯುತ್ ಉಪಕೇಂದ್ರ ಸ್ಥಾಪನೆಯಿಂದ ಗ್ರಾಮ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ವಿದ್ಯುತ್ ಸಮಸ್ಯೆಗಳಿಗೆ ಪರಿಹಾರ ದೊರೆಯುವ ನಿರೀಕ್ಷೆಯಿದೆ. ಇದರ ಜತೆಗೆ ಹಡಲಸಂಗ



ಸೊನಕನಹಳ್ಳಿ ರಸ್ತೆ ಸುಧಾರಣೆ ಕಾಮಗಾರಿ ಲೋಕಾರ್ಪಣೆ, ಶ್ರೀ ಸಾಬರಭದ್ರ ದೇವಸ್ಥಾನದ ಬಳಿ ಹಾಗೂ ಶ್ರೀ ವಿಠ್ಠಲ ದೇವಸ್ಥಾನದ ಬಳಿ ಸಮುದಾಯ ಭವನಗಳ ನಿರ್ಮಾಣ–ಕ್ಕೆ ಭೂಮಿಪೂಜೆ, ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು.

ದೇವಸ್ಥಾನಗಳ ಅಭಿವೃದ್ಧಿ, ಸಮುದಾಯ ಭವನಗಳ ನಿರ್ಮಾಣ, ಶಿಕ್ಷಣ ಕ್ಷೇತ್ರದ ಪ್ರಗತಿ, ರಸ್ತೆ ಸುಧಾರಣೆ ಹಾಗೂ ಕೆರೆಗಳ ಅಭಿವೃದ್ಧಿ ಸೇರಿದಂತೆ ಗ್ರಾಮಗಳ ಮೂಲಸೌಕರ್ಯ ಮತ್ತು ಸಾರ್ವಜನಿಕರ ಅಗತ್ಯಗಳಿಗೆ ಸಂಬಂಧಿಸಿದ ಹಲವು ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಗ್ರಾಮೀಣ ಭಾಗದ ಸಮಗ್ರ ಅಭಿವೃದ್ಧಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು ಪ್ರಮುಖ ಆದ್ಯತೆಯಾಗಿದೆ. ಜನರ ಅಗತ್ಯಗಳಿಗೆ ಸ್ಪಂದಿಸಿ ಅಭಿವೃದ್ಧಿ ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ಹಾಗೂ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆ ಅಧಿಕಾರಿ ದಯಾನಂದ ಮಠ, ವಿದ್ಯುತ್ ಇಲಾಖೆ ಅಧಿಕಾರಿ ರಮೇಶ ಪವಾರ, ಬಿ.ಎಸ್. ಕವಲಗಿ, ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಪ್ರಶಾಂತ ಕಾಳೆ, ಬಿ.ಸಿ. ಸಾವಕಾರ, ಶಿವಯೋಗೆಪ್ಪ ಚನಗೊಂಡ, ಸಿದ್ದಪ್ಪ, ಎಸ್.ಎ. ಬಿರಾದಾರ, ಜಗದೀಶ ಜಾಧವ, ಎಸ್.ಎಸ್. ಪಾಟೀಲ, ಎ.ಇ.ಇ. ಸಂದೀಪ, ಗುತ್ತಿಗೆದಾರ ಗಚ್ಚಿನಮಠ, ಭೀಮಣ್ಣ ಗಡ್ಡದ, ಕಾಂತಾ ರೀಸಾಲ್ದಾರ, ಸಂತೋಷಗೌಡ ಪಾಟೀಲ, ಮಲ್ಲೇಶ ಡೋಣಗಿ, ರಾಜು ಗೂಗವಾಡ, ಭೀಮ ಪವಾರ, ಶೇಖರ ನಾಯಕ, ವಿನೋದ ಶಹಾಪುರ, ವಿದ್ಯುತ್ ಇಲಾಖೆ ಅಧಿಕಾರಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತ–ರಿದ್ದರು.

### ಎಸ್.ಎಸ್.ಪಪೂ ಕಾಲೇಜಿನಲ್ಲಿ ಪ್ರತಿಭೋತ್ಸವ ಉದ್ಘಾಟಿಸಿದ ಬಿ.ಎಲ್.ಡಿ.ಇ ಸಂಸ್ಥೆ ಪ್ರ. ಕಾರ್ಯದರ್ಶಿ ಮತ್ತು ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಅಭಿಮತ

# ಸ್ಪರ್ಧಾತ್ಮಕ ಯುಗದಲ್ಲಿ ಬೌದ್ಧಿಕ ಜ್ಞಾನವೇ ಶ್ರೇಷ್ಠ ಸಂಪತ್ತು

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಭೌತಿಕ ಆಸ್ತಿಗಿಂತ ಬೌದ್ಧಿಕ ಜ್ಞಾನವೇ ಶ್ರೇಷ್ಠ ಸಂಪತ್ತಾಗಿದೆ ಎಂದು ಬಿ.ಎಲ್.ಡಿ.ಇ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಹೇಳಿದ್ದಾರೆ.

ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್. ಎಸ್. ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾದ ಪ್ರತಿಭೋತ್ಸವ 2025–26 ಕಾರ್ಯಕ್ರಮ ಉದ್ಘಾಟಿಸಿದ ಅವರ, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದರು.

ಶಿಕ್ಷಣವಿಲ್ಲದೆ ಏನೂ ಸಾಧ್ಯವಿಲ್ಲ. ಪ್ರತಿಯೊಂದು ಸಾಧನೆಗೆ ಶಿಕ್ಷಣ ಅಗತ್ಯವಾಗಿದೆ. ನಮ್ಮ ವಿದ್ಯಾರ್ಥಿಗಳು ಶಿಕ್ಷಣ ಕ್ಷೇತ್ರದಲ್ಲಿರುವ ಸ್ಪರ್ಧೆಗೆ ತಕ್ಕಂತೆ ವಿದ್ಯಾರ್ಜನೆ ಮಾಡಲು ಬಿ.ಎಲ್.ಡಿ.ಇ ಸಂಸ್ಥೆ ನೀಟ್, ಜೆಇಇ, ಸಿಇಟಿ, ಕೆಸಿಇಟಿ, ನಾಟಾ, ಕ್ಲ್ಯಾಟ್ ಮುಂತಾದ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತಿದೆ ಎಂದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ. ವಿ. ಉಪ್ಪಾರ ಮಾತನಾಡಿ, ಪ್ರತಿಭೆಯನ್ನು ಗುರುತಿಸಿದಾಗ ಆತ್ಮವಿಶ್ವಾಸ ಬೆಳೆಯುತ್ತದೆ. ಆತ್ಮವಿಶ್ವಾಸ ಬೆಳೆದಾಗ ಸಾಧನೆಯ ಹಾದಿ ತೆರೆದುಕೊಳ್ಳುತ್ತದೆ. ಪ್ರತಿಭಾ ಪುರಸ್ಕಾರವು ವಿದ್ಯಾರ್ಥಿಗಳ ಭವಿಷ್ಯಕ್ಕೆ ಹೊಸ ಭರವಸೆಯ ಬೆಳಕನ್ನು



ನೀಡುವ ವೇದಿಕೆಯಾಗಿದೆ ಎಂದು ಹೇಳಿದರು.

ಎಸ್. ಎಸ್. ಆವರಣದ ಆಡಳಿತಾಧಿಕಾರಿ ಪ್ರೊ. ಐ. ಎಸ್. ಕಾಳಪ್ಪನವರ ಮಾತನಾಡಿದರು.

ಇದೇ ವೇಳೆ ರಾಜ್ಯಮಟ್ಟದಲ್ಲಿ ಸಾಧನೆಗೈದ ಸಾನಿಕಾ ಮೆಟಗಾರ, ಅಕ್ಷತಾ ಚವ್ಹಾಣ, ಯುವರಾಜ ಬಗಲಿ ಸೇ–ರಿದಂತೆ ಹಲವು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಬಾಲಗಾಂವ ಗುರುದೇವಾಶ್ರಮದ ಡಾ. ಅಮೃತಾನಂದ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು, ಶಾಲಾ ಶಿಕ್ಷಣ ಇಲಾಖೆ ಶಾಖಾಧಿಕಾರಿ ಪ್ರಕಾಶ ಗೊಂಗಡಿ, ಬಿ.ಎಲ್.ಡಿ.ಇ ಸಂಸ್ಥೆಯ ನಿರ್ದೇಶಕ ಸಂಗನಬಸಪ್ಪ ಸಜ್ಜನ, ಬೋಧಕ, ಬೋಧಕರ ಹೊರತಾದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶಿಕ್ಷಕ ಜೆ. ಎ. ಬಿರಾದಾರ ನಿರೂಪಿಸಿದರು. ಪ್ರಾಚಾರ್ಯ ಡಾ. ಜಿ. ಡಿ. ಅಕಮಂಚಿ ಸ್ವಾಗತಿಸಿದರು. ಟಿ. ಎಂ. ಪವಾರ ವಂದಿಸಿದರು.



# ಎಐ ಯುಗಕ್ಕೆ ತಕ್ಕಂತೆ ಶಿಕ್ಷಕರು ಬದಲಾಗಿ: ಪ್ರೊ.ಶಿವಪ್ರಸಾದ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಇಂದಿನ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಶೈಕ್ಷಣಿಕ ವಾತಾವರಣಕ್ಕೆ ತಕ್ಕಂತೆ ಬೋಧಕ ಸಿಬ್ಬಂದಿ ತಮ್ಮ ಬೋಧನಾ ವಿಧಾನಗಳಲ್ಲಿ ಬದಲಾವಣೆ ಮಾಡಿಕೊಳ್ಳುವುದರ ಜತೆಗೆ ಸಂಶೋಧನಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಧಾರವಾಡದ ಐಐಟಿ ಪ್ರಾಧ್ಯಾಪಕ ಪ್ರೊ. ಎಸ್.ಎಂ. ಶಿವಪ್ರಸಾದ ಹೇಳಿದರು.

ಪಟ್ಟಣದ ಶ್ರೀ ಸಂಗಮೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶ (ಐಕ್ಯೂಎಸಿ) ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ಕೋಶ (ಆರ್&ಡಿ ಸೆಲ್) ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ 'ಋಜ ಖಿಜಚಿಛಿಜಡಿ ඃಜಥಿಠಟಜ ಖಿಜಚಿಛಿಋ–ಽಟಿರ' ಒಂದು ದಿನದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸವಾಲಿನ ಪ್ರಶ್ನೆಗಳನ್ನು ಹಾಗೂ ಹಿಂದುಳಿದ ವಿದ್ಯಾರ್ಥಿಗಳಿಗೆ ಸರಳವಾದ, ಸಹಾಯಕ ಚಟುವಟಿಕೆಗಳನ್ನು ಎಐ ಕ್ಷಣಾರ್ಧದಲ್ಲಿ ರೂಪಿಸಬಲ್ಲದು. ನಿರ್ದಿಷ್ಟ ತರಗತಿಯ ಮಟ್ಟಕ್ಕೆ ಅನುಗುಣವಾಗಿ ಪಾಠ ಯೋಜನೆ ರೂಪಿಸುವುದು, ವಿಷಯಾಧಾರಿತ ಚಟುವಟಿಕೆಗಳ ಕಲ್ಪನೆ ನೀಡುವುದು ಹಾಗೂ ಕಠಿಣ ವಿಷಯಗಳು ಅಥವಾ ಲೇಖನಗಳನ್ನು ವಿದ್ಯಾರ್ಥಿಗಳ ವಯಸ್ಸಿಗೆ ತಕ್ಕಂತೆ ಸರಳ ಭಾಷೆಯಲ್ಲಿ ವಿವರಿಸುವಲ್ಲಿಯೂ ಎಐ ಸಹಕಾರಿಯಾಗುತ್ತದೆ. ಹೀಗಾಗಿ ಬದಲಾಗುತ್ತಿರುವ ಶೈಕ್ಷಣಿಕ ಪರಿಸ್ಥಿತಿಗೆ ಅನುಗುಣವಾಗಿ ಶಿಕ್ಷಕರು ತಮ್ಮ ಜ್ಞಾನ, ಕೌಶಲ ಮತ್ತು ಬೋಧನಾ ವಿಧಾನಗಳನ್ನು ನಿರಂತರವಾಗಿ ನವೀಕರಿಸಿಕೊಳ್ಳಬೇಕು ಎಂದರು.

ಹಿರಿಯ ನಿರ್ದೇಶಕ ಬಸವರಾಜ ಯಂಕಂಚಿ, ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಪ್ರೊ. ಎಂ.ಕೆ. ಬಿರಾದಾರ ಮಾತನಾಡಿ, ಮಾತನಾಡಿದರು.

ಕಾರ್ಯಾಗಾರದಲ್ಲಿ ಬೋಧನಾ ಕ್ಷೇತ್ರದ ಹೊಸ ಆಯಾಮಗಳು, ಸಂಶೋಧನಾ ಮನೋಭಾವ ಬೆಳೆಸುವಿಕೆ, ಎಐ ಆಧಾರಿತ ನವೀನ ಬೋಧನಾ ವಿಧಾನಗಳು ಹಾಗೂ ಶೈಕ್ಷಣಿಕ ನೈತಿಕತೆಯ ಮಹತ್ವ ಕುರಿತು ವಿಚಾರ ವಿನಿಮಯ ನಡೆಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ವಿ.ಎಸ್. ಗೀಡವಿರ, ಸಂಸ್ಥೆಯ ಸದಸ್ಯ ಪ್ರೊ. ಆರ್.ಪಿ. ಬಗಲಿ, ಆಡಳಿತಾಧಿಕಾರಿ ಡಾ. ಎಸ್.ಎಸ್. ಚೋರಗಿ, ಐಕ್ಯೂಎಸಿ ಸಂಯೋಜಕ ಡಾ. ಎಸ್.ಎಸ್.ದೇಸಾಯಿ, ಸಂಶೋಧನೆ ಮತ್ತು ಅಭಿವೃದ್ಧಿ ಕೋಶದ ಸಂಂ–ಯೋಜಕ ಪ್ರೊ. ಬಸವರಾಜ ಯಳ್ಳೂರ, ಸಂಸ್ಥೆಯ ವಿವಿಧ ಅಂಗಸಂಸ್ಥೆಗಳ ಮುಖ್ಯಸ್ಥರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ಚಡಚಣ ತಾಲೂಕಿನ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರು ಉಪಸ್ಥಿತರಿದ್ದರು.

# ಸಾಹಿತಿ ಡಾ.ಮಲ್ಲಿಕಾರ್ಜುನ ಆಲಮೇಲ ಗೆ ಪ್ರಶಸ್ತಿ

■ ಉದಯರಶ್ಮಿ ದಿನಪತ್ರಿಕೆ



ಕಲಬುರ್ಗಿ: ಸಾಹಿತ್ಯ, ಸಂಘಟನೆ, ರಂಗಭೂಮಿ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಜಿಲ್ಲೆಯ, ಯಡ್ರಾಮಿ ಪಟ್ಟಣದ ಯುವ ಸಾಹಿತಿ, ಡಾ.ಮಲ್ಲಿಕಾರ್ಜುನ ಎಸ್. ಆಲಮೇಲ ಅವರನ್ನು ಇಂಟರ್ ನ್ಯಾಷನಲ್ ಸ್ಟಾರ್ ಅವಾರ್ಡ ಗೆ ಆಯ್ಕೆ ಮಾಡಲಾಗಿದೆ.

ಬೆಳಕು ಸಾಹಿತ್ಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಟ್ರಸ್ಟ್ ವತಿಯಿಂದ ಸೆ.27ರಂದು ಬೆಂಗಳೂರಿನ ಚಾಮರಾಜಪೇಟೆಯ ಅಕ್ಕಮಹಾದೇವಿ ಸಭಾಂಗಣದಲ್ಲಿ ನಡೆಯಲಿರುವ 126ನೇ ಚಿಗುರು ಸಮ್ಮೇಳನದಲ್ಲಿ, ಆಲಮೇಲ ಅವರಿಗೆ ಇಂಟರ್ ನ್ಯಾಷನಲ್ ಸ್ಟಾರ್ ಅವಾರ್ಡ್ ಪ್ರದಾನ ಮಾಡಲಾಗುವುದು ಎಂದು ಸಂಸ್ಥಾಪಕ ಅಧ್ಯಕ್ಷ ಅಣ್ಣಪ್ಪ ಮೇಟಿಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


# 'ಉತ್ತಮ ಶಿಕ್ಷಕ' ಪ್ರಶಸ್ತಿಗೆ ಲಕ್ಷ್ಮೀಪುತ್ರ ಕಿರನಳ್ಳಿ ಭಾಜನ

■ ಉದಯರಶ್ಮಿ ದಿನಪತ್ರಿಕೆ



ಆಲಮೇಲ: ಪಟ್ಟಣದ ವಿಶ್ವೇಶ್ವರ ಬಾಲಭಾರತಿ ಅನುದಾನಿತ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಹಾಗೂ ಸಿಂದಗಿ ತಾಲ್ಲೂಕಿನ ಅನುದಾನಿತ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಲಕ್ಷ್ಮೀಪುತ್ರ ಕಿರನಳ್ಳಿ ರವರಿಗೆ ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ(ರಿ.)ಬೆಂಗಳೂರು ವತಿಯಿಂದ ಕೊಡಮಾಡುವ ರಾಜ್ಯ ಮಟ್ಟದ ಉತ್ತಮ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ಸಂಘದ ರಾಜಾಧ್ಯಕ್ಷರು ಶಿವಾನಂದ ಹಿರೇಕುರುಬರ ತಿಳಿಸಿದ್ದಾರೆ.

ಕಿರನಳ್ಳಿ ಅವರ ಶೈಕ್ಷಣಿಕ, ಸಾಮಾಜಿಕ ಹಾಗೂ ಸಂಘಟನಾ ಸೇವೆಯನ್ನು ಪರಿಗಣಿಸಿ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಪ್ರಶಸ್ತಿ ಪ್ರಧಾನ ಸಮಿತಿ ಅಧ್ಯಕ್ಷ ಎಸ್.ಪಾಲನೇತ್ರ ತಿಳಿಸಿರುತ್ತಾರೆ.



## ಕಾಂಗ್ರೆಸ್ ಸದಸ್ಯನಿಗೆ ಅಧ್ಯಕ್ಷ ಪಟ್ಟ । ಬಿಜೆಪಿ ಪಾಳಯದಲ್ಲಿ ಸಂಭ್ರಮ

# ಕೊಲ್ಹಾರ ಪಪಂ ಅಧ್ಯಕ್ಷರಾಗಿ ಕಲಾದಗಿ ಅವಿರೋಧ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ಪಟ್ಟಣ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ 15ನೇ ವಾರ್ಡ್‌ನ ಕಾಂಗ್ರೆಸ್ ಸದಸ್ಯ ದಸ್ತಗೀರ ಮಕ್ತುಂಸಾಬ ಕಲಾದಗಿ ಅವಿರೋಧವಾಗಿ ಆಯ್ಕೆಯಾದರು.

ಹಿಂದಿನ ಅಧ್ಯಕ್ಷ ಚನಮಲ್ಲಪ್ಪ ಗಿಡ್ಡಪ್ಪಗೋಳ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಉಳಿದ ಅವಧಿಗಾಗಿ ಚುನಾವಣೆ ನಡೆಸಲಾಯಿತು. ಚುನಾವಣಾಧಿಕಾರಿಯಾಗಿ ತಹಶೀಲ್ದಾರ್ ಸಂತೋಷ ಮ್ಯಾಗೇರಿ ಕಾರ್ಯನಿರ್ವಹಿಸಿದರು. ಪಪಂ ಮುಖ್ಯಾಧಿಕಾರಿ ವೀರೇಶ ಹಟ್ಟಿ ಉಪಸ್ಥಿತ–ರಿದ್ದರು.

ಅಧ್ಯಕ್ಷ ಸ್ಥಾನಕ್ಕೆ ದಸ್ತಗೀರ ಕಲಾದಗಿ ಹಾಗೂ 10ನೇ ವಾರ್ಡ್ ಸದಸ್ಯೆ ಯಾಸ್ಮೀನಾಬಾನು ಮೈಬುಸಾಬ ಕಲಾದಗಿ ನಾಮಪತ್ರ ಸಲ್ಲಿಸಿದ್ದರು. ನಾಮಪತ್ರ ಹಿಂಪಡೆಯುವ ಅವಧಿಯಲ್ಲಿ ಯಾಸ್ಮೀನಾಬಾನು ಅವರು ತಮ್ಮ ಉಮೇದುವಾ–ರಿಕೆಯನ್ನು ಹಿಂಪಡೆದ ಹಿನ್ನೆಲೆಯಲ್ಲಿ ದಸ್ತಗೀರ ಕಲಾದಗಿ ಅವಿರೋಧವಾಗಿ ಆಯ್ಕೆಯಾದರು ಎಂದು ಚುನಾವಣಾಧಿಕಾರಿ ಘೋಷಿಸಿದರು.

ಪಪಂನಲ್ಲಿ ಒಟ್ಟು 17 ಸದಸ್ಯರಿದ್ದು, ಓರ್ವ ಸದಸ್ಯರ ನಿಧನದಿಂದ ಪ್ರಸ್ತುತ 16 ಸದಸ್ಯರಿದ್ದಾರೆ. ಶಾಸಕ ಶಿವಾನಂದ ಪಾಟೀಲ ಹಾಗೂ ಸಂಸದ ರಮೇಶ ಜಿಗಜಿಣಗಿ ಅವರಿಗೆ ಮತದಾನದ ಹಕ್ಕು ಇದ್ದರೂ ಚುನಾವಣಾ ಪ್ರಕ್ರಿಯೆಗೆ ಹಾಜರಾಗಿರಲಿಲ್ಲ. 11ನೇ ಹಾಗೂ 13ನೇ ವಾರ್ಡ್‌ನ ಸದಸ್ಯರೂ ಗೈರಾಗಿದ್ದರು.

### ಬಿಜೆಪಿ ಮುಖಂಡರೊಂದಿಗೆ ವಿಜಯೋತ್ಸವ

**ದಸ್ತಗೀರ ಕಲಾದಗಿ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಬಿಜೆಪಿ ಜಿಲ್ಲಾ ಮುಖಂಡ ಮಲ್ಲಿಕಾರ್ಜುನ ಬೆಳ್ಳುಬ್ಬಿ ಹಾಗೂ ಬಿಜೆಪಿ ಕಾರ್ಯಕರ್ತರೊಂದಿಗೆ ವಿಜಯೋತ್ಸವ ಆಚರಿಸಲಾಯಿತು. ಕಾಂಗ್ರೆಸ್ ಸದಸ್ಯರೊಬ್ಬರು ಅಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭದಲ್ಲಿ ಬಿಜೆಪಿ ಮುಖಂಡರು ವಿಜಯೋತ್ಸವದಲ್ಲಿ ಭಾಗವಹಿಸಿರುವುದು ಸ್ಥಳೀಯ ರಾಜಕೀಯ ವಲಯದಲ್ಲಿ ಗಮನ ಸೆಳೆಯಿತು.**

**ಅಧ್ಯಕ್ಷ ಸ್ಥಾನದ ಚುನಾವಣೆಗೆ ಮುನ್ನ ವಿವಿಧ ಹೆಸರುಗಳು ಕೇಳಿಬಂದಿದ್ದರೂ ಅಂತಿಮವಾಗಿ ದಸ್ತಗೀರ ಕಲಾದಗಿ ಅವಿರೋಧವಾಗಿ ಆಯ್ಕೆಯಾಗಿರುವುದು ಕುತೂಹಲಕ್ಕೆ ಕಾರಣವಾಗಿದೆ. ನಾಮಪತ್ರ ಹಿಂಪಡೆಯುವ ಬೆಳವಣಿಗೆ ಹಾಗೂ ಕೆಲವು ಸದಸ್ಯರ ಗೈರುಹಾಜರಿ ಕೂಡ ಚರ್ಚೆಗೆ ಗ್ರಾಸವಾಗಿದೆ.**

## ವಿಜಯಪುರದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಪಾಲಿಕೆ ಸ್ವಚ್ಛತಾ ಕಾರ್ಮಿಕರಿಂದ ವಿಶೇಷವಾಗಿ ಜಾಗೃತಿ ಓಟ

# ವೃಕ್ಷಥಾನ್ ಹೆರಿಟೇಜ್ ರನ್: ವಿಶೇಷ ಜಾಗೃತಿ ಓಟ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಡಿಸೆಂಬರ್ 13 ರಂದು ನಗರದಲ್ಲಿ ನಡೆಯುವ ವೃಕ್ಷಥಾನ್ ಹೆರಿಟೇಜ್ ರನ್ ಸಲುವಾಗಿ ಇಂದು ರವಿವಾರ ನಗರದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಪಾಲಿಕೆ ಸ್ವಚ್ಛತಾ ಕಾರ್ಮಿಕರಿಂದ ವಿಶೇಷವಾಗಿ ಜಾಗೃತಿ ಓಟ ನಡೆಯಿತು.

ಬೆಳಗ್ಗೆ ಇಲ್ಲಿನ ಗಗನ್ ಮಹಲ್ ಬಳಿ ಓಟಕ್ಕೆ ಚಾಲನೆ ನೀಡಿ ಮಾತನಾಡಿದ ಮಹಾ ನಗರ ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿಯವರು, ಸಚಿವ ಎಂ. ಬಿ. ಪಾಟೀಲ ಅವರ ನಿರಂತರ ಶ್ರಮದಿಂದ ವಿಜಯಪುರ ಪರಿಸರ ಬದಲಾಗಿದೆ. ಪಾಲಿಕೆ ಪೌರ ಕಾರ್ಮಿಕರು, ಅರಣ್ಯ ಸಿಬ್ಬಂದಿಯೊಂದಿಗೆ ಓಡಿದ್ದು ತಮಗೆ ಸಂತಸ ಹಾಗೂ ತೃಪ್ತಿ ತಂದಿದೆ ಎಂದು ಹೇಳಿದರು.

ಸಾಮಾಜಿಕ ಅರಣ್ಯ ವಲಯ ಉಪ ಸಂರಕ್ಷಣಾಧಿಕಾರಿ ಶಿವರುದ್ರ ಕಬಾಡಗಿ ಮಾತನಾಡಿ, ಅರಣ್ಯ ಉಳಿಸಿ, ಬೆಳೆಸಲು ವೃಕ್ಷಥಾನ್ ಹೆರಿಟೇಜ್ ರನ್ ಮಹತ್ವದ ಪಾತ್ರ ವಹಿಸುತ್ತಿದೆ. ಎಲ್ಲ ವರ್ಗದವರೂ ಇದರಲ್ಲಿ ಭಾಗವಹಿಸುತ್ತಿರುವುದು ವಿಶೇಷವಾಗಿದೆ ಎಂದು ಹೇಳಿದರು.



ವಿಜಯಪುರ ಸೈಕಲ್ ಗ್ರುಪ್ ಅಧ್ಯಕ್ಷ ಡಾ.ಮಹಾಂತೇಶ ಬಿರಾದಾರ ಪ್ರಾಸ್ತಾವಿಕ ಮಾತನಾಡಿ, ಹೆಸರು ನೋಂದಾಯಿಸಿದ ಪೌರ ಕಾರ್ಮಿಕರಿಗೆ ಉಚಿತ ನೋಂದಣಿ ಮಾಡಿಸಲಾಗುವುದು. ಹತ್ತು, ಐದು ಕಿಮಿ ಓಟವನ್ನು ಅವರು ಪೂರೈಸಬಹುದು. ಸ್ವಚ್ಛ ವಿಜಯಪುರ, ಹಸಿರು ವಿಜಯಪುರ ಘೋಷ ವಾಕ್ಯದೊಂದಿಗೆ ಇವತ್ತು ಈ ಮೂರು ಕಿಮೀ ಜಾಗೃತಿ ಓಟವನ್ನು ಗಗನ್ ಮಹಲ್‌ನಿಂದ ಶಿವಾಜಿ ವೃತ್ತದ ವರೆಗೆ ಓಡಲಾಗಿದೆ ಎಂದು ಹೇಳಿದರು.

ಜಗತ್ತಿನಲ್ಲಿ ಕೇವಲ ಶೇ. 2ರಷ್ಟು ಜನ ಮಾತ್ರ ಓಡುತ್ತಾರೆ. ವಿಜಯಪುರದ ಐದು ಲಕ್ಷ ಜನರಲ್ಲಿ ಕೇವಲ ಐದಾರು ಸಾವಿರ ಜನ ಮಾತ್ರ ಓಡುತ್ತಾರೆ, ವಾಕ್ ಮಾಡುತ್ತಾರೆ ಮತ್ತು ಬೇಗ ಏಳುತ್ತಾರೆ. ಸೂರ್ಯೋದಯಕ್ಕೂ ಮೊದಲು ಏಳುವವರ ಸಂಖ್ಯೆ ಹೆಚ್ಚಾಗಬೇಕು. ಆರೋಗ್ಯ ಕಾಪಾಡಿಕೊಳ್ಳಲು ಮತ್ತು ಗಿಡ ನೆಡಲು, ಅವುಗಳನ್ನು ಕಾಪಾಡಿ ನಮ್ಮ ಪ್ರಕೃತಿ ಉಳಿಸುವ ಸಲುವಾಗಿ ಈ ವೃಕ್ಷಥಾನ್ ನಡೆದಿದೆ. ಜನರಲ್ಲಿ ಇದ–ರಿಂದ ಕನಿಷ್ಠ ಇರೋ ಗಿಡಗಳನ್ನಾದರೂ ಕಡಿಯಬಾರದು ಎನ್ನುವ ಮನೋಭಾವ ಬೆಳೆದಿದೆ. ಮುಂದೆ ಇನ್ನೂ ಬದಲಾಗಲಿದ್ದಾರೆ ಎಂದು ಆಶಿಸಿದರು.

ಮೇಯರ್ ಮಡಿವಾಳ ಕರಡಿ, ಪಾಲಿಕೆ ಸದಸ್ಯ ಪ್ರೇಮಾನಂದ ಬಿರಾದಾರ ಮಾತನಾಡಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಮಲ್ಲಿನಾಥ ಕುಸನಾಳ, ಎನ್.ಕೆ. ಬಾಗಾಯತ್, ಎಸಿಎಫ್‌ಗಳಾದ ಅನಂತಕುಮಾರ ಪಾಕೆ, ಸೆಲ್ವರಾಜ್ ನಾಯ್ಕರ್, ಶಿವಾನಂದ ಜಿಡ್ಡಿಮನಿ, ರಮೇಶ ಚವ್ಹಾಣ ಹಾಗೂ ಸಹಾಯಕ ಅರಣ್ಯ ಅಧಿಕಾರಿಗಳು, ವಲಯ ಅರಣ್ಯ ಅಧಿಕಾರಿಗಳು, ಸಿಬ್ಬಂದಿ ಇದ್ದರು.

ವಿಸಿಜಿ ಸದಸ್ಯರು, ನನ್ನ ಗಿಡ ನನ್ನ ಭೂಮಿ ಪದಾಧಿಕಾ–ರಿಗಳು ಉಪಸ್ಥಿತರಿದ್ದರು.

# ಎ.ವಿ.ಎಸ್ ಆಯುರ್ವೇದ ಕಾಲೇಜಿನಲ್ಲಿ ವಿಶ್ವ ರೇಬಿಸ್ ದಿನಾಚರಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಬಿ. ಎಲ್. ಡಿ. ಇ ಸಂಸ್ಥೆಯ ಎ. ವಿ. ಎಸ್ ಆಯುರ್ವೇದ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಆಗದತಂತ್ರ ವಿಭಾಗದ ವತಿಯಿಂದ ಕಾಲೇಜಿನಲ್ಲಿ ವಿಶ್ವ ರೇಬಿಸ್ ದಿನ ಆಚ–ರಿಸಲಾಯಿತು.

ಇದರ ಅಂಗವಾಗಿ ಜನಸಾಮಾನ್ಯರಲ್ಲಿ ರೇಬೀಸ್ ವೈರಾಣು ಹರಡುವ ವಿಧಾನ, ರೋಗಪೀಡಿತ ಸಾಕಿದ ನಾಯಿಗಳಿಂದ ಹಾಗೂ ಬೀದಿ ನಾಯಿಗಳಿಂದ ಕೆಲವು ಭಾರಿ ಎದುರಾಗುವ ಪ್ರಾಣಾಪಾಯದ ಕುರಿತು ಜನಜಾಗೃತಿ ಅಭಿಯಾನ ನಡೆಸಲಾಯಿತು.

ಈ ಅಭಿಯಾನದಲ್ಲಿ ಮಹಾವಿದ್ಯಾಲಯದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು. ಅಲ್ಲದೇ, ಮಹಾವಿದ್ಯಾಲಯದ ಆವರಣದಿಂದ ನಗರದ ಕೇಂದ್ರ ಬಸ್ ನಿಲ್ದಾಣದ ವರೆಗೆ ಜಾಥಾ ಕಾರ್ಯಕ್ರಮ ನಡೆಸಲಾಯಿತು.




ಈ ಜಾಥಾದಲ್ಲಿ ಬೀದಿ ನಾಯಿಗಳ ಕಡಿತ, ಮುನ್ನೆಚ್ಚ–ರಿಕಾ ಕ್ರಮಗಳು, ಲಕ್ಷಣಗಳು, ಪ್ರಥಮ ಚಿಕಿತ್ಸೆ, ಉಪಚಾರ ಕುರಿತು ವೈದ್ಯ ವಿದ್ಯಾರ್ಥಿಗಳು ಬೀದಿ ನಾಟಕ ಪ್ರದರ್ಶನ ಮಾಡಿದರು. ಜನಸಾಮಾನ್ಯರಲ್ಲಿ ರೇಬೀಸ್ ಮುಕ್ತ ಭಾರತ ಎಂಬುದರ ಬಗ್ಗೆ ಅರಿವು ಮೂಡಿಸಲಾಯಿತು.

ಅಗದ ತಂತ್ರ ವಿಭಾಗದ ಮುಖ್ಯಸ್ಥೆ ಡಾ. ಮಲ್ಲಮ್ಮ ಬಿರಾದಾರ, ಸಹಾಯಕ ಪ್ರಾಧ್ಯಾಪಕ ಡಾ. ದಾಮೋದರ ನಾಯಕ ಹಾಗೂ ಸಹಪ್ರಾಧ್ಯಾಪಕಿ ಡಾ. ಶ್ವೇತಾ ನಿಡಗುಂದಿ, ಕಾಲೇಜಿನ ಪ್ರಾಚಾರ್ಯ ಡಾ. ಅಶೋಕ ಪಾಟೀಲ ಜಾಥ–ಾಕ್ಕೆ ಚಾಲನೇ ನೀಡಿ ಜನ ಸಾಮಾನ್ಯರಲ್ಲಿ ರೇಬೀಸ್ ಬಗ್ಗೆ ಜಾಗೃತಿ ಮೂಡಿಸುವ ಗುರುತರ ಜವಾಬ್ದಾರಿ ನಮ್ಮ ಮೇಲಿದೆ ಎಂದು ತಿಳಿಸಿದರು.

# ಮಕ್ಕಳಲ್ಲಿ ಸೃಜನಶೀಲತೆ ಬೆಳೆಸುವ ಚಿತ್ರಕಲೆ ಶಿಬಿರಗಳು

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಚಿತ್ರಕಲೆ ಶಿಬಿರಗಳು ಮಕ್ಕಳಲ್ಲಿ ಆತ್ಮವಿಶ್ವಾಸ, ಕಲಾಸಕ್ತಿ ಹಾಗೂ ಸೃಜನಶೀಲತೆಯನ್ನು ಬೆಳೆಸಲು ಸಹಕಾರಿಯಾಗುತ್ತವೆ ಎಂದು ಖ್ಯಾತ ಕಲಾವಿದ ಸತೀಶ ಹಿರೇಮಠ ಹೇಳಿದರು.

ನಗರದ ಸರಕಾರಿ ಆರ್ಟ್ ಗ್ಯಾಲರಿ, ಪ್ರವಾಸೋದ್ಯಮ ಇಲಾಖೆಯಲ್ಲಿ ಅಪ್ಪ ಫೌಂಡೇಶನ್ (ರಿ), ವಿಜಯಪುರ ವತಿಯಿಂದ ಸೆ.20 ಭಾನುವಾರ ಜರುಗಿದ ಮಕ್ಕಳ ಚಿತ್ರಕಲಾ ಪ್ರದರ್ಶನ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಟಿ.ವಿ. ಮಲಗೊಂಡ ಶಿಕ್ಷಕರು ವಹಿಸಿದ್ದರು.

ಈ ಸಂದರ್ಭದಲ್ಲಿ ಅತಿಥಿ ಎನ್.ಎ. ಚಿಮ್ಮಲಗಿ ಗುರುಗಳು ಮಾತನಾಡಿ, ಅಪ್ಪ ಫೌಂಡೇಶನ್‌ನ ಉದ್ದೇಶ ಹಾಗೂ ಕಾರ್ಯಚಟುವಟಿಕೆಗಳ ಕುರಿತು ವಿವರಿಸಿ, 'ಅಪ್ಪ' ಎಂದರೆ ಕೇವಲ ಒಂದು ಪದವಲ್ಲ; ಮಕ್ಕಳಿಗೆ ದಾರಿ ತೋ–ರಿಸುವ, ಪ್ರೋತ್ಸಾಹಿಸುವ, ಕಾಳಜಿ ವಹಿಸುವ ಹಾಗೂ ಕಷ್ಟ–ಸುಖಗಳಲ್ಲಿ ಜೊತೆಯಾಗಿ ನಿಂತು ಅವರ ಪ್ರತಿಭೆಗೆ ಬೆಂಬಲ ನೀಡುವ ಮಹತ್ವದ ವ್ಯಕ್ತಿತ್ವ ಎಂದು ಅಪ್ಪನ ಮಹತ್ವವನ್ನು ವಿವರಿಸಿದರು. ಹಿರಿಯ ಕಲಾವಿದ ರಮೇಶ ಚವಾಣ್ ಮಾತನಾಡಿ, ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಅವರಿಗೆ ಸೂಕ್ತ ವೇದಿಕೆ ಕಲ್ಪಿಸುವ ಕಾರ್ಯವನ್ನು ಅಪ್ಪ ಫೌಂಡೇಶನ್ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಮಕ್ಕಳಲ್ಲಿರುವ ಸೃಜನಶೀಲತೆ ಮತ್ತು ಕಲಾ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಸೂಕ್ತ ವೇದಿಕೆ ಕಲ್ಪಿಸುವಲ್ಲಿ ಅಪ್ಪ ಫೌಂಡೇಶನ್‌ನಂತಹ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿದೆ ಎಂದು ಗಣ್ಯರು ಅಭಿಪ್ರಾಯಪಟ್ಟರು.



**ಮಕ್ಕಳ ಚಿತ್ರಕಲಾ ಪ್ರದರ್ಶನ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮ ಉದ್ಘಾಟಿಸಿದ ಖ್ಯಾತ ಕಲಾವಿದ ಸತೀಶ ಹಿರೇಮಠ ಅಭಿಮತ**

ಕಾರ್ಯಕ್ರಮದಲ್ಲಿ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ ಬಾಲ ಕಲಾವಿದರ ಚಿತ್ರಗಳನ್ನು ಪ್ರದರ್ಶನಕ್ಕಿಡಲಾಗಿತ್ತು. ವಿವಿಧ ವಿಭಾಗಗಳಲ್ಲಿ ಉತ್ತಮ ಪ್ರತಿಭೆ ಪ್ರದರ್ಶಿಸಿದ ಮಕ್ಕಳಿಗೆ ಪ್ರಶಸ್ತಿ ಹಾಗೂ ಪ್ರಮಾಣಪತ್ರಗಳನ್ನು ವಿತರಿಸಿ ಗೌರವಿಸಲಾಯಿತು. ಮಕ್ಕಳ ಸಾಧನೆಗೆ ಪಾಲಕರು ಹಾಗೂ ಶಿಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಆನಂದ ಝುಂಡೆ, ಶಿವಾನಂದ ಅಥಣಿ, ಮದನ್ ವಗ್ಯಾನವರ, ಕಮಲೇಶ ಭಜಂತ್ರಿ, ನಯೀಮ್ ನಾಗಠಾಣ, ಸಿದ್ದು ಬಳುಲಗಿಡದ, ಸಲೀಮ್ ವಾಲಿಕಾರ, ಸುಖದೇವ ಕಾಂಬಳೆ, ಪ್ರಜ್ವಲ್ ಬಿರಾದಾರ, ಗೌರೀಶ್ ಮಲಗೊಂಡ ಸೇರಿದಂತೆ ಅನೇಕ ಕಲಾವಿದರು, ಶಿಕ್ಷಕರು, ಪಾಲಕರು, ಬಾಲ ಕಲಾವಿದರು ಹಾಗೂ ಅಪ್ಪ ಫೌಂಡೇಶನ್‌ನ ಪದಾಧಿಕಾರಿಗಳು ಮತ್ತು ಅಭಿಮಾನಿಗಳು ಉಪಸ್ಥಿತರಿದ್ದರು.

# ಜಾನಪದ ನಮ್ಮ ಭೌದ್ಧಿಕ ಸಂಪತ್ತಿನ ಹೆಗ್ಗುರುತು :ಪಾಟೀಲ

■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ಜಾನಪದದ ಎಂದರೆ ಕೇವಲ ಹಾಡು ಮತ್ತು ಕುಣಿತವಲ್ಲ. ಅದು ನಮ್ಮ ಭೌದ್ಧಿಕ ಸಂಪತ್ತಿನ ಹೆಗ್ಗುರುತು. ಜಾನಪದ ಸಂಸ್ಕೃತಿ ನಮ್ಮ ಪೂರ್ವಜರು ಅರಿತು ಅನುಭವಿಸಿ ಕಟ್ಟಿಕೊಟ್ಟ ಅಮೂಲ್ಯ ಸಂಪತ್ತು. ಬದುಕಿನ ಹಾದಿಗೆ ಬೆಳಕು ನೀಡುವ ದಾರಿ ದೀಪವಾಗಿದೆ ಎಂದು ಕನ್ನಡ ಜಾನಪದ ಪರಿಷತ್ ವಿಜಯಪುರ ಜಿಲ್ಲಾಧ್ಯಕ್ಷ ಬಾಳನಗೌಡ ಪಾಟೀಲ ಪಡಗಾನೂರ ಹೇಳಿದರು.

ಕನ್ನಡ ಜಾನಪದ ಪರಿಷತ್ ವಿಜಯಪುರ ಜಿಲ್ಲಾ, ತಾಲೂಕು ಮತ್ತು ವಲಯ ಘಟಕದ ವತಿಯಿಂದ ತಾಲೂಕಿನ ಕವಲಗಿ ಗ್ರಾಮದ ಬಯಲು ರಂಗ ಮಂದಿರದಲ್ಲಿ ಏರ್ಪಡಿಸಿದ್ದ ವಿಶ್ವ ಜಾನಪದ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಇಂದು ಜಾನಪದ ಸಂಸ್ಕೃತಿ ಕುರಿತು ಅಸಡ್ಡೆ ತೋರುತ್ತಿರುವುದು ನೈತಿಕತೆಯ ಮೇಲೆ ಕೆಟ್ಟ ಪರಿಣಾಮ ಬಂದಿರುತ್ತದೆ. ಆರೋಗ್ಯಕರ ಜಾನಪದ ವಿಚಾರಗಳನ್ನು ದಿನನಿತ್ಯದ ಜೀವನದಲ್ಲಿ ಅರಿತು ಅಳವಡಿಸಿಕೊಳ್ಳುವ ಮನಸ್ಸು ಮಾಡಬೇಕೆಂದು ಕರೆ ನೀಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಹಿರಿಯ ಜಾನಪದ ಕಲಾವಿದ ಮೌಲಾಸಾಹೇಬ ಜಹಾಗೀರದಾರ (ಉಪ್ಪಲದಿನ್ನಿ), ಜಾನಪದ ಕಲೆ ಉಳಿಯಬೇಕಾದರೆ ಕಲಾವಿದರು ಬೆಳೆಯಬೇಕು. ಕಲಾವಿದರು ಬಹಳ ಸಂಕಷ್ಟದಲ್ಲಿದ್ದಾರೆ. ಸರಕಾರ ಮತ್ತು ಸಮುದಾಯ ಕಲಾವಿದರನ್ನು ಗುರುತಿಸಿ ಸಹಾಯ ಮಾಡಬೇಕು. ಗ್ರಾಮದಲ್ಲಿ ನಡೆಯುವ ಪ್ರತಿ ಕಾರ್ಯಕ್ರಮದಲ್ಲಿ ಜಾನಪದ ಪ್ರದರ್ಶನ ನಡೆಸಿ ಕಲಾವಿದರಿಗೆ ಪ್ರೋತ್ಸಾಹ ನೀಡಬೇಕೆಂದು ಮನವಿ ಮಾಡಿದರು.



ವೇದಿಕೆಯಲ್ಲಿ ಅತಿಥಿಗಳಾಗಿ ಈರಣ್ಣ ಹೊಸಮನಿ( ಬೆಳ್ಳುಬ್ಬಿ) ವೀರಭದ್ರಯ್ಯ ಮಠಪತಿ, ಶಾಂತಯ್ಯ ಹಿರೇಮಠ, ಪರಪ್ಪ ಕುಂಬಾರ, ಕಾಂತು ತಳವಾರ ಉಪಸ್ಥಿತರಿದ್ದರು. ಹಿರಿಯ ಜಾನಪದ ಕಲಾವಿದರಾದ ಶ್ರೀಶೈಲ ಬಾಟಿ( ಭಜನೆ) ಹಾಜಿಸಾಬ ಮುಲ್ಲಾ (ಹಂತಿಪದ) ಪವಾಡೆಪ್ಪ ಗೊಳಸಂಗಿ (ಹೆಜ್ಜೆ ಕುಣಿತ) ಅಜೀಜಸಾಬ ಜಹಾಗೀರದಾರ (ರಿವಾಯಿತಿ ಪದ) ಸನ್ಮಾನಿಸಲಾಯಿತು.

ಕನ್ನಡ ಜಾನಪದ ಪರಿಷತ್ ವಲಯ ಘಟಕದ ಅಧ್ಯಕ್ಷ ದುಂಡಯ್ಯ ಮಠಪತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ವಿಶ್ವನಾಥ ಪತ್ತಾರ ನಿರೂಪಿಸಿದರು. ರಾಜು ಚಿರಲದಿನ್ನಿ ಸ್ವಾಗತಿಸಿದರು. ನಾಗೇಶ್ ಪತ್ತಾರ ವಂದಿಸಿದರು. ದಿನಾಚರಣೆ ನಿಮಿತ್ಯ ಹಂತಿಪದ, ಭಜನೆಪದ, ರಿವಾಯತಪದ, ಹೆಜ್ಜೆ ಕುಣಿತ ಪ್ರದರ್ಶನ ನಡೆಯಿತು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR